# ಕೊಡಗು ಸಂಗಾತಿ

ಡಿಸೆಂಬರ್ 1 ರಿಂದ 15, 1999

ಪಾಕ್ಷಿಕ ಪತ್ರಿಕೆ

(ಜಾರ್ದೆ 15 ರಿಂದ 29 ರ ತನಕ)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

K.R. N. N. 240 | ಸಂಪುಟ : 3 | ಸಂಚಿಕೆ : 23 | ಪುಟಗಳು : 24 | ಬೆಲೆ ರೂ. : 5-00




ಗೌಡ ಸಂಪ್ರದಾಯದ ಹಳೆ ಉಡುಪಿನೊಂದಿಗೆ, ಅಮ್ಮಾಜೀರ ಪೊನ್ನಪ್ಪ ಸ್ವರಚಿತ "ಸುಗ್ಗಿ ಸುವ್ವಾಲೆ ಕುಣಿತ, ನೆರೆಕಟ್ಟಿ, ಕದಿರು ಕುಯ್ಯೊ ಹುತ್ತೇರಿ" ಕ್ಯಾಸೆಟ್ಸ್ ಹಾಡಿಗೆ ನರ್ತಿಸುತ್ತಿರುವ ಪುಟಾಣಿ ಕಡ್ಲೆಮನೆ ಅಂಕಿತ

## 1999ರ ನವಂಬರ್‌ನಲ್ಲಿ ಮಡಿಕೇರಿಯಲ್ಲಿ ನಡೆದ ಅರೆಭಾಷೆ ಗೌಡರ ಕೈಲು ಮುಹೂರ್ತ ಕ್ರೀಡಾಕೂಟದ ಸಾಂಸ್ಕೃತಿಕ ಮೇಳ ಜರುಗಿತು

## ಮಡಿಕೇರಿಯಲ್ಲಿ ನಡೆದ ಶತಮಾನದ ಕೊನೆಯ ಗೌಡರ ಕೈಲ್ ಮುಹೂರ್ತ ಹಬ್ಬ



ನವಂಬರ್‌ನಲ್ಲಿ ಮಡಿಕೇರಿಯಲ್ಲಿ ನಡೆದ ಶತಮಾನದ ಕೊನೆಯ ಗೌಡರ ಕೈಲ್ ಮುಹೂರ್ತ ಕ್ರೀಡಾ ಕೂಟ ನಡೆಯಿತು. ಮಹಿಳೆಯರ ಹಗ್ಗ ಜಗ್ಗಾಟದಲ್ಲಿ ಪ್ರಥಮ ಸ್ಥಾನ ಪಡೆದ ಕಟ್ಟೆಮನೆ ಸ್ಥಾನದ ಗೌಡವತಿಯರು. ತಮ್ಮ ತಂಡದ ಮ್ಯಾನೇಜರ್ ಕಟ್ಟೆಮನೆ ಗಣೇಶ್‌ನವರೊಂದಿಗೆ ಪ್ರೇಮಾಗಣೇಶ್, ಲಲಿತ ರಾಜ್‌ಕುಮಾರ್, ಪದ್ಮಾ ಲೋಕನಾಥ, ಲೌಲಿ ಸತೀಶ, ವಾಣಿ ಮುರುಳಿ, ಸುಧಾ ದೇವಯ್ಯ ಮತ್ತು ಘನು ಇಂದ್ರೇಶ್ ಇವರನ್ನು ಚಿತ್ರದಲ್ಲಿ ಕಾಣಬಹುದು.

## ಸಂಗಾತಿ ಪತ್ರಿಕೆಗೆ ಜೀವಾವಧಿ ಸದಸ್ಯತನ ಕೊಟ್ಟೊಳೊ



ಕಡ್ಲೇರ ಜಾಜಿ ಮುದ್ದ ಹನುಮಯ್ಯ, ಬೆಂಗಳೂರು ಇವು ಪತ್ರಿಕೆಯ ಅಭಿವೃದ್ಧಿ ದೃಷ್ಠಿಯಿಂದ ಜೀವಾವಧಿ ಸದಸ್ಯತನ ಕೊಟ್ಟ್ ಸಹಕರಿಸೊಳೋ. ಇವುಕೆ ಕುಲದೇವ್ರು ವೆಂಕಟರಮಣನ ಕೃಪಾಕಟಾಕ್ಷ ಸದಾ ಇರಲಿತ್ತೇಳಿ ಸಂಗಾತಿ ಶುಭ ಹಾರೈಸಿದೆ.

**- ಸಂಪಾದಕಿ**

**ವಿಳಾಸ : ಕೆ. ಯಂ. ಜಾಜಿ**
ಮನೆ ನಂ. 579, 7ನೇ ಮುಖ್ಯ ರಸ್ತೆ,
ಡಾ. ನವೀರು ಕ್ಲಿನಿಕ್ ಹತ್ತಿರ, ವಿಜಯನಗರ,
ಬೆಂಗಳೂರು 40, ✆ : 080/3407371

## ಮೈಸೂರು ಜಿಲ್ಲೆಯ ಅರೆಭಾಷಿಕ ಗೌಡ ಯುವಕರಿಗೊಂದು ಸುವಾರ್ತೆ



ಜನಾಂಗದ ಅಭಿವೃದ್ಧಿ ಮತ್ತು ಸಂಘಟನೆಗೆ ಕ್ರೀಡೆ ಅನಿವಾರ್ಯ. ಮೈಸೂರು ಜಿಲ್ಲೆಯಲ್ಲಿ ವಾಸವಿರುವ ಯುವಕರನ್ನು ಕಲೆ ಹಾಕಿ ನಮ್ಮ ಜನಾಂಗದ ಒಂದು ಉತ್ತಮ ಕ್ರಿಕೆಟ್ ತಂಡವನ್ನು ಕಟ್ಟುವ ಅಭಿಪ್ರಾಯವಿರುವುದು. ಆಸಕ್ತಿ ಇರುವ ಯುವಕರು ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸುವಂತೆ ಕೋರಲಾಗಿದೆ.

**ಸಂಘಟನಾ ಕಾಯದರ್ಶಿ** : ದೀಪಕ್
✆ : 516771, C/o ಕೊಡಗು ಸಂಗಾತಿ, 35, ಸವಿತಾ ನಿಲಯ,
1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿ ಪುರಂ, ಮೈಸೂರು -12

# ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಗೌರವ ಸಂಪಾದಕ :
ಪಟ್ಟಡ ಎಂ. ಪ್ರಭಾಕರ

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

**ಕೊಡಗು ಸಂಗಾತಿ**
ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಜಯಲಕ್ಷ್ಮಿಪುರಂ, ಮೈಸೂರು - 570 012.
**ಫೋನ್ : 0821/516771**

**ಮಡಿಕೇರಿಯಲ್ಲಿ ಸಂಗಾತಿ ಕಛೇರಿ**

ಸಂಗಾತಿ ಚಿಹ್ನೆ ಮತ್ತು ಪಾಕ್ಷಿಕ ಲಭ್ಯ
ಬೈತಡ್ಕ ಜಾನಕಿ ಬೆಳ್ಯಪ್ಪ
ನಂ. 21-16 ಎಲ್. ಐ. ಸಿ. ಹತ್ತಿರ
ರೇಸ್ ಕೋರ್ಸ್ ರಸ್ತೆ, ಮಡಿಕೇರಿ
ದೂರವಾಣಿ : 08272/28047

**ಕೊಡಗು ಸಂಗಾತಿ ಚಿಹ್ನೆ ಲಭ್ಯ**

ಪಾಂಡ್ಯನ್ ಕ್ಯಾಸೆಟ್ ಅಂಗಡಿ,
ಖಾಸಗಿ ಬಸ್ ನಿಲ್ದಾಣ, ಮಡಿಕೇರಿ - 571 201
ದೂರವಾಣಿ : 08272/29620

ಕುಂಭಗೌಡನ ಸೋಮಣ್ಣ
ಮಯೂರ ಕೋಲ್ಡ್ ಸ್ಟೋರೇಜ್
ಮುಖ್ಯ ರಸ್ತೆ, ಕುಶಾಲನಗರ - 571 234
ದೂರವಾಣಿ : 08276/73370 (R.)

ಅಮ್ಮಾಜೇರ ಪೊನ್ನಪ್ಪ
20, 1ನೇ ಮೈನ್, 4ನೇ ಕ್ರಾಸ್
ಸಾಕಮ್ಮ ಗಾರ್ಡನ್, ಬಸವನಗುಡಿ,
ಬೆಂಗಳೂರು - 04
ದೂರವಾಣಿ - 080/6342822

ಕಲ್ಲುಮುಟ್ಲು ಬಸಪ್ಪ
ನಂ. 233/9, 2ನೇ ಕ್ರಾಸ್, ನಂಜಪ್ಪ ಬ್ಲಾಕ್,
ಕೆಂಪೇಗೌಡ ನಗರ, ಬೆಂಗಳೂರು - 19
ದೂರವಾಣಿ - 080/6549669

## ಒಳನೋಟ

| | |
|---|---|
| ಸಂಪಾದಕೀಯ : ತಾಯಂದಿರಿಗೆ ತರಬೇತಿ ಅವಶ್ಯಕ | 02 |
| ಕವನ, ನಿಮಗಿದು ತಿಳಿದಿದೆಯೆ | 02 |
| ಹತ್ತು ಕುಟುಂಬ ಹದಿನೆಂಟು ಗೋತ್ರಗಳ ಬಗ್ಗೆ ಒಂದು ಇಣುಕು ನೋಟ | 03 |
| ಕವನ, ಚುಟುಕುಗಳು | 04 |
| "ಬೆಸುಗೆ", ಕವನ | 06 |
| ಪರಶುರಾಮನ ಹುಟ್ಟು | 07 |
| ಸರ್ಪಗಂಧ - ಧಾರವಾಹಿ - 19 | 08 |
| ಅರೆಭಾಷೆ ಗೌಡರ ಗೋತ್ರದ ಪ್ರಕಾರ ಮನೆಯ ಹೆಸರುಗಳು | 09 |
| ನಗೆಹನಿಗಳು | 10 |
| ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯಿಂದ ಶತಮಾನದ ಕೊನೆಯ ಕೈಲ್ ಮುಹೂರ್ತ ಕ್ರೀಡಾಕೂಟ | 11 |
| ಪತ್ರ ವಿಭಾಗ | 14 |
| ಶುಭಾಶಯಗಳು | 14 |
| ವ್ಯಕ್ತಿ ಪರಿಚಯ, ಕವನ | 18 |

### ಅರೆಭಾಷಿಕ ವಿಭಾಗ

| | |
|---|---|
| ಸಂಸಾರದ ಗೋಳು | 05 |
| ತಿಳ್‌ದವು ಹೇಳ್ದರ ತಿಳ್ಕಂಕು | 10 |
| "ಅರೆಭಾಷಿಕರ ಒಂದ್ ಪದ್ದತಿ" ಕಾರ್ಣ್‌ವಕ್ಕೆ ಇಸುದ್ | 14 |
| ಕೊಡಗ್ ಗೌಡ ಸಾಸ್ಕೃತಿಕ ಅಕಾಡೆಮಿ (ರಿ) | 15 |
| ಅರೆಭಾಷೆ ತಬ್ಬುಲಿ : ಇಂಗ್ಲೀಷ್ ಹೆಬ್ಬುಲಿ, ಕವನ | 16 |
| ಭಾವಂಗೆ ಶನಿದೆಸೆ | 17 |
| ಇಸ್ಪೇಟಾಟ | 17 |
| ಒಂದ್ ಕಣ್ಣಿಗೆ ಸುಣ್ಣ, ಒಂದ್ ಕಣ್ಣಿಗೆ ಬೆಣ್ಣೆ | 17 |

## ಚಂದಾ ವಿವರ

| | | |
|---|---|---|
| ಜೀವಾವಧಿ ಸದಸ್ಯತನ | - | 2000 ರೂ. |
| ವಾರ್ಷಿಕ ಚಂದಾ | - | 120 ರೂ. |
| ಅರ್ಧ ವಾರ್ಷಿಕ | - | 60 ರೂ. |
| ಬಿಡಿ ಪ್ರತಿ | - | 5 ರೂ. |

# ಸಂಪಾದಕೀಯ : ತಾಯಂದಿರಿಗೆ ತರಬೇತಿ ಅವಶ್ಯಕ

ಒಂದು ದೇಶದ ಯಾ ಸಮಾಜದ ಪ್ರಜೆಗಳು ಸುಸಂಸ್ಕೃತರಾಗಿರಬೇಕಾದರೆ ಆ ಮನೆಯಲ್ಲಿ ಹುಟ್ಟಿದ ಮಗುವನ್ನ ಭಾವೀ ಪ್ರಜೆಯಾಗಿ ರೂಪಿಸುವ ಜವಾಬ್ದಾರಿ ತಾಯಿಯದೇ ಆಗಿದೆ ಎಂಬ ಮಾತಿಗೆ ಇನ್ನೊಂದು ಮಾತಿಲ್ಲ. ಮಗು ಮನೆಯಿಂದ ಹೊರಗೆ ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿ ತನ್ನ ಮುಂದಿದ ಜೀವನದ ದಾರಿಯನ್ನು ಕಂಡು ಕೊಳ್ಳುವುದಾದರೂ ಹುಟ್ಟಿನಿಂದ ಶಾಲಾ ಕಾಲೇಜುಗಳಿಗೆ ಹೋಗವವರೆಗೂ ಹೋದ ನಂತರವೂ ಮಗುವಿನ ಪ್ರತಿಯೊಂದು ಬೆಳವಣಿಗೆಯಲ್ಲಿ ಪಾಲ್ಗೊಂಡು ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತಳಾಗುತ್ತಾಳೆ. ತಾಯಿಗೆ ಮಗುವಿನ ಆರೋಗ್ಯದ ಬಗ್ಗೆ, ಶುಚಿತ್ವದ ಬಗ್ಗೆ, ಮಗುವಿನ ಮನೋವಿಕಾಸದ ಬಗ್ಗೆ ತಾಯಿಯಾದವಳು ತಕ್ಕ ಪರಿಣತಿಯನ್ನು ಪಡೆದಿರಬೇಕು. ಹಿಂದಿನ ಕಾಲದಲ್ಲಿ ಮಗುವನ್ನು ಹೆತ್ತು ಊಟ ಬಟ್ಟೆ ಕೊಟ್ಟರೆ ಮಗುವನ್ನ ಬೆಳೆಸಿದಂತೆ ಎಂಬ ಭಾವನೆ ಇದ್ದುದರಿಂದಲೇ ಮಕ್ಕಳು ಅವರ ಪಾಡಿಗೆ ಬೆಳೆದು ಯದ್ವಾ ತದ್ವ ಜೀವನವನ್ನ ನಡೆಸುವಂತಾಗಿ ಸುವ್ಯವಸ್ಥೆಯ ನಾಗರೀಕರಾಗಿರುವುದು ಸಾಧ್ಯವಿಲ್ಲದ ಪರಿಸ್ಥಿತಿ ಉಂಟಾಗಿದೆ. ಅದರ ಬದಲು ಪ್ರತಿಯೊಬ್ಬ ತಾಯಿಯಾದವಳಿಗೆ ಸತ್ಪ್ರಜೆಯಾಗಿ ಬದುಕಿ ಬಾಳಲು ತನ್ನ ಮಗುವನ್ನ ಯಾವ ರೀತಿ ಸಾಕಬೇಕು ಮಗುವು ಬುದ್ಧಿವಂತನಾಗಿ ಬೆಳೆಯಬೇಕಾದರೆ ಆ ಮಗುವಿನ ಆರೋಗ್ಯದ ವಿಷಯದಲ್ಲಿ ಯಾವ ರೀತಿಯ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಮಗುವಿನಲ್ಲಿ ಹುದುಗಿರುವ ಬುದ್ಧಿವಂತಿಕೆಯನ್ನು ತಜ್ಞರ ಅಭಿಪ್ರಾಯದಂತೆ ರೂಪಿಸುವ ಜವಾಬ್ದಾರಿ ತಾಯಿಯದ್ದಾಗಿದೆ. ಇದಕ್ಕೆ ನಮ್ಮ ಹಳ್ಳಿಗಳಿಗೆ ವೈದ್ಯಾಧಿಕಾರಿಗಳು ಮನಶಾಸ್ತ್ರಜ್ಞರು ಆಗಿಂದಾಗ್ಯೆ ಭೇಟಿ ಕೊಟ್ಟು ಇಂತಹ ವಿಷಯಗಳಿಗೆ ತಾಯಂದಿರಿಗೆ ತಕ್ಕ ತರಬೇತಿಯನ್ನು ಕೊಡುವಂತಾಗಬೇಕು ಪ್ರಜೆಗಳನ್ನು ತಯಾರು ಮಾಡುವ ಜವಾಬ್ದಾರಿಯನ್ನು ತಾಯಂದಿರ ಮೇಲೆಯೇ ಬಿಡದೆ ಸರ್ಕಾರವು ಸಹ ಈ ವಿಷಯದಲ್ಲಿ ತಕ್ಕ ಗಮನ ಹರಿಸಿ ದೇಶದ ಪ್ರಜೆಯನ್ನು ಸತ್ಪ್ರಜೆಯಾಗಿ ಮಾಡಲು ಪ್ರಯತ್ನಿಸಬೇಕು. ಈ ಜವಾಬ್ದಾರಿಯನ್ನು ತಾಯಂದಿರ ಹಾಗೂ ಸರ್ಕಾರದ ಮೇಲೆ ಹೊಂದಿಕೊಳ್ಳದೆ ಜನತೆ ಯಾ ಸಮಾಜವೂ ಈ ವಿಷಯದಲ್ಲಿ ಜವಾಬ್ದಾರಿಕೆಯನ್ನು ವಹಿಸಬೇಕು. ಜನತೆ ಈ ವಿಷಯಕ್ಕಾಗಿ ಗ್ರಾಮ ಗ್ರಾಮಗಳಲ್ಲಿ ಪ್ರದೇಶಗಳಲ್ಲಿ ಅಲ್ಲಲ್ಲಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಇಂತಹ ತರಬೇತಿ ಕೇಂದ್ರಗಳನ್ನು ತೆರೆದು ತಾಯಂದಿರಿಗೆ ಮಕ್ಕಳಿಗೆ ತಕ್ಕ ಸೌಲಭ್ಯವನ್ನು ಕಲ್ಪಿಸಬೇಕು. ತಾಯಂದಿರು ಸರ್ಕಾರ ಹಾಗೂ ಸಮಾಜ ಈ ಮೂರು ಹುರಿಗಳಂತೆ ಮುಪ್ಪುರಿಗೊಂಡು ಮುಂದಿನ ಭವ್ಯ ಭಾರತದ ನಿರ್ಮಾಣಕ್ಕೆ ಅಣಿಯಾಗಬೇಕೆಂದು ಸಂಗಾತಿ ಬಯಸುತ್ತದೆ.

## ಗೌರವದ ರಹಸ್ಯ

ಆಧುನಿಕ ಕಾಲದಿ ಗೌರವ ಸಿಗಲು
ಇರಬೇಕು ನಿಮ್ಮಲಿ ಶುಚಿತ್ವದ ಟವಲು ॥೧॥
ಮೌನಿಯಾಗಿ ಪಥದಿ ಚಲಿಸಬೇಕು
ವಂದನೆ ಮಾಡಿರಿ ಸುಜನರಿಗೆ ಮುಗುಳ್ನಕ್ಕು ॥೨॥
ಹಸ್ತದಲ್ಲಿ ಇರಬೇಕು ಮಿಂಚುವ ವಾಚು
ತಲೆಯ ಮೇಲಿರಬೇಕು ಸ್ಟೈಲಿನ ಕ್ರಾಪು ॥೩॥
ಧರಿಸಿರಬೇಕು ಚೆಲುವಿನ ಪೆನ್ನುಗಳೆರಡು
ಕರದಲ್ಲಿರಬೇಕು ಶೋಭಿಪ ಬೇಗು ॥೪॥
ಸ್ವಂತ ವಾಹನದಿ ಪಯಣವು ಚೆನ್ನ
ಅಪರೂಪದ ಸಭೆಗೆ ಹೋಗುವ ಮುನ್ನ ॥೫॥
ಬಳಿಯಲ್ಲಿದ್ದವರ ಪ್ರಶಂಸಿಸಬೇಕು
ಎಂದಿಗೂ ಪರರನು ಹೊಗಳಲು ಬೇಕು ॥೬॥
ಆಂಗ್ಲ ಪದಗಳ ಆಗಾಗ ಬಳಸಬೇಕು
ಸೃಜನಶೀಲ ಮುಂತಾದ ಪದ ಹೇಳಬೇಕು ॥೭॥
ಒಂದೆರಡು ಭಾವಗೀತೆ ತಿಳಿದಿರಬೇಕು
ಉದ್ಯೋಗವೊಂದು ನೆಪಕ್ಕೆ ಇರಲೇಬೇಕು ॥೮॥
ಆಗ ಪಡೆಯುವಿರಿ ವಿಶೇಷ ಸನ್ಮಾನ
ಹೋದಲ್ಲಿ ಪಡೆವಿರಿ ಪ್ರೀತಿ ಸನ್ಮಾನ ॥೯॥

ಮಂಡೆಕೋಲು ಗಂಗಾಧರ ಗೌಡ, ಉಬರಡ್ಕ ಮಿತ್ತೂರು ಗ್ರಾಮ

## ನಿಮಗಿದು ತಿಳಿದಿದೆಯೆ

| ವ್ಯಕ್ತಿಗಳು | ಖ್ಯಾತನಾಮ |
|---|---|
| ಮಹಾತ್ಮಾಗಾಂಧಿ | ಬಾಪೂಜಿ |
| ಇಂದಿರಾಗಾಂಧಿ | ಪ್ರಿಯದರ್ಶಿನಿ |
| ಸುಭಾಸ್ ಚಂದ್ರ ಬೋಸ್ | ನೇತಾಜಿ |
| ಜವಹರ್‌ಲಾಲ್‌ನೆಹರು | ಚಾಚಾ |
| ಪಿ.ಟಿ. ಉಷಾ | ಚಿನ್ನದ ಹುಡುಗಿ |
| ಲಾಲಾ ಲಜಪತರಾಯ್ | ಪಂಜಾಬ್‌ಕೇಸರಿ |
| ಸಿ. ಗೋಪಾಲಾಚಾರಿ | ರಾಜಾಜಿ |
| ಟಿಪ್ಪುಸುಲ್ತಾನ್ | ಮೈಸೂರಿನ ಹುಲಿ |
| ರವೀಂದ್ರನಾಥ್ ಠಾಗೋರ್ | ಗುರುದೇವ |
| ಫ್ಲಾರೆನ್ಸ್ ನೈಟಿಂಗೇಲ್ | ದೀಪದಾರಿ ಮಹಿಳೆ |
| ಜಯಪ್ರಕಾಶ್ ನಾರಾಯಣ | ಲೋಕನಾಯಕ್ |
| ಸುನಿಲ್ ಗವಾಸ್ಕರ್ | ಲಿಟಲ್ ಮಾಸ್ಟರ್ |
| ಸರದಾರ್ ವಲ್ಲಭಾಯಿಪಟೇಲ್ | ಉಕ್ಕಿನ ಮನುಷ್ಯ |
| ಲಾಲ್‌ಬಹದೂರ್ ಶಾಸ್ತ್ರಿ | ಶಾಂತಿದೂತ |
| ಸರೋಜಿನಿ ನಾಯ್ಡು | ಭಾರತದ ಕೋಗಿಲೆ. |

**ಸಂಗ್ರಹ : ಊರೋಳನ ಬೀನಾ ಸುಬ್ಬಯ್ಯ, ಅವಂದೂರು.**

**ಕೊಡಗು ಸಂಗಾತಿ, ಪಾಕ್ಷಿಕ ಅನ್ನು ಕೊಂಡು ಓದಿರಿ.**

# ಪರಶುರಾಮನ ಹುಟ್ಟು

ಸಂಚಿಕೆ 20 ರಲ್ಲಿ, ಎಡಿಕೇರಿ ಸುದರ್ಶನ್‌ರವರು ಬರೆದ "ಮರಳಿಗೂಡಿಗೆ" ಬಹಳ ಚೆನ್ನಾಗಿತ್ತು. ಹೃದಯವಂತರ ಮನದಾಳದ ಭಾವನೆಯೇ ಲೇಖನಿಯಿಂದ ಹರಿದು ಬಂದಂತಿತ್ತು. ಆದರೆ ಶ್ರೀಕೃಷ್ಣನ ಅಣ್ಣ ಬಲರಾಮನು ಕೊಡಲಿ ಬಿಸಾಡಿದ ಜಾಗ ಮಲೆನಾಡು ಎಂದು ಓದಿ ತುಂಬಾ ಕಸಿವಿಸಿಯಾಯಿತು. ಈ ತಪ್ಪು ಕಲ್ಪನೆಯನ್ನು ದೂರ ಮಾಡುವುದು ನನ್ನ ಕರ್ತವ್ಯವೆನ್ನಿಸಿತು.

ಕೊಡಲಿ = ಪರಶು ಎಂದರ್ಥ ಇದು ಪರಶುರಾಮನ ಆಯುಧ. ನೇಗಿಲು = ಹಲ, ಹಲಾಯುಧ ಇದು ಬಲರಾಮನ ಆಯುಧ. ಕ್ಷತ್ರಿಯರ ನಾಶಕ್ಕಾಗಿಯೇ ಪರಶುರಾಮನ ಅವತಾರವಾಯಿತು. ಇವನ ಅವತಾರ (ಹುಟ್ಟು) ಬಹಳ ಸ್ವಾರಸ್ಯವಾದ ಕತೆ.


ಹಿಂದೆ ಚಂದ್ರ ವಂಶದಲ್ಲಿ ಗಾದಿ ಎಂಬ ರಾಜನಿದ್ದನು. ಗಂಗೆಯನ್ನು ಆಪೋಷನ ತೆಗೆದುಕೊಂಡ ಜಹ್ನು ಋಷಿಯ ವಂಶದಲ್ಲಿ ಈ ಗಾದಿರಾಜನು ಜನಿಸಿದ್ದನು. ಇವನಿಗೆ ಬಹಳ ಸುಂದರಿಯಾದ ಸತ್ಯವತಿ ಎಂಬ ಮಗಳಿದ್ದಳು. ಋಚೀಕನೆಂಬ ಬ್ರಾಹ್ಮಣನು ಅವಳನ್ನು ತನಗೆ ಮದುವೆ ಮಾಡಿ ಕೊಡಿ ಎಂದು ಬೇಡಿದನು. ಮಗಳನ್ನು ಬಡಬ್ರಾಹ್ಮಣನಿಗೆ ಕೊಡಲು ಮನಸ್ಸಿಲ್ಲದ ಗಾದಿರಾಜನು ದೇಹವೆಲ್ಲ ಚಂದ್ರನಂತೆ ಬೆಳ್ಳಗೆ, ಕಿವಿಮಾತ್ರ ಕಪ್ಪಾಗಿರುವ ಒಂದು ಸಾವಿರ ಕುದುರೆಯನ್ನು ತಂದು ಕೊಟ್ಟವರಿಗೆ ಮಾತ್ರ ತನ್ನ ಮಗಳನ್ನು ಕೊಡುವುದು ಎಂದು ಹೇಳಿಬಿಟ್ಟ. ಧನದಲ್ಲಿ ಬಡವನಾದರೂ ವಿದ್ಯೆಯಲ್ಲಿ ಶ್ರೀಮಂತನಾದ ಋಚೀಕನು ವರುಣನನ್ನು ಪ್ರಾರ್ಥಿಸಿ ಕುದುರೆಗಳನ್ನು ತಂದುಕೊಟ್ಟು, ಸತ್ಯವತಿಯನ್ನು ವರಿಸಿದನು. ಗಾದಿರಾಜನಿಗೆ ಗಂಡು ಸಂತತಿ ಇರಲಿಲ್ಲ. ಆದ್ದರಿಂದ ಸತ್ಯವತಿಯ ತಾಯಿ ಮತ್ತು ಸತ್ಯವತಿ ಇಬ್ಬರೂ ತಮಗೆ ಪುತ್ರ ಸಂತಾನವನ್ನು ಅನುಗ್ರಹಿಸಿ ಎಂದು ಋಚೀಕನನ್ನು ಕೇಳಿಕೊಂಡರು. ಅದರಂತೆ ಋಚೀಕನು ಕ್ಷತ್ರಿಯನು ಹುಟ್ಟುತಕ್ಕ ಮಂತ್ರದಿಂದ ಅತ್ತೆಗೂ, ಬ್ರಾಹ್ಮಣರು ಹುಟ್ಟುತಕ್ಕ ಮಂತ್ರದಿಂದ ಹೆಂಡತಿಗೂ ಹವಿಸ್ಸನ್ನು ತಯಾರಿಸಿಟ್ಟು ಸ್ನಾನಕೆಂದು ನದಿಗೆ ಹೋದನು. ಮಗಳಿಗೆ ತಯಾರಿಸಿದ ಹವಿಸ್ಸು ತನ್ನದಕ್ಕಿಂತ ಶ್ರೇಷ್ಠವಾಗಿರ ಬಹುದು ಎಂದು ಭಾವಿಸಿದ ಅವಳ ತಾಯಿ ಮಗಳಿಗೆ ಹೇಳಿ, ಹವಿಸ್ಸನ್ನು ಬದಲಾಯಿಸಿಕೊಂಡು ತಿಂದು ಹಾಕಿದರು. ಗಂಡ ಮನೆಗೆ ಬಂದಕೂಡಲೆ ಸತ್ಯವತಿಯು ಅದನ್ನು ಅವನಿಗೆ ಹೇಳಿದಳು. ಅವನೇನು ಮಾಡಿಯಾನು? ನಿನ್ನ ಕರ್ಮ ನಿನ್ನ ಹೊಟ್ಟೆಯಲ್ಲಿ ಕ್ರೂರಿಯಾದ ಕ್ಷತ್ರಿಯನು ಹುಟ್ಟುತ್ತಾನೆ ಎಂದು ನಿನ್ನ ತಾಯಿಯ ಹೊಟ್ಟೆಯಲ್ಲಿ ಬ್ರಹ್ಮಜ್ಞಾನಿ ಹುಟ್ಟುವನು ಎಂದು ಹೇಳಿದನು. ಗಾಬರಿಯಾದ ಸತ್ಯವತಿಯು ತನಗೆ ಕ್ರೂರಿಯಾದ ಮಗನು ಬೇಡ, ನನ್ನ ತಪ್ಪನ್ನು ಕ್ಷಮಿಸಿ ಎಂದು ಬೇಡಿಕೊಂಡಳು. ಋಚೀಕನು ಹಾಗೆಯೇ ಆಗಲಿ, ಆದರೆ ನಿನ್ನ ಮಗ ಶಾಂತನಾದರೂ ನಿನ್ನ ಮಗನ ಮಗ ಕ್ರೂರಿಯಾಗುತ್ತಾನೆ ಎಂದು ಹೇಳಿದನು. ಅಂತೆಯೇ ಆಕೆಯ ಹೊಟ್ಟೆಯಲ್ಲಿ ಜಮದಗ್ನಿ ಋಷಿ ಹುಟ್ಟುವನು. ಅದನ್ನು ಕಂಡು ಸತ್ಯವತಿ ಸಂತೋಷದಿಂದ ಕೌಶಿಕಿ ನದಿಯಾಗಿ ಹರಿದು ಹೋದಳು. ಇತ್ತ ತಾಯಿಯ ಹೊಟ್ಟೆಯಲ್ಲಿ ಲೋಕವಿಖ್ಯಾತ ರಾಜಋಷಿ ವಿಶ್ವಾಮಿತ್ರರ ಜನನವಾಯಿತು. ಮುಂದೆ ಈತ ಬ್ರಹ್ಮರ್ಷಿ ಆಗಲು ಈ ಹವಿಸ್ಸೆ ಕಾರಣ.

ಜಮದಗ್ನಿ ಮತ್ತು ರೇಣುಕೆಗೆ ಕೊನೆಯ ಮಗನಾಗಿ ಪರಶುರಾಮ ಹುಟ್ಟಿದನು. ಒಮ್ಮೆ ರೇಣುಕೆ ನೀರು ತರಲು ಹೋದಾಗ, ಜಲಕ್ರೀಡೆಯಾಡುತ್ತಿದ್ದ ಚಿತ್ರರಥ ಎಂಬ ಗಂಧರ್ವನ ಸೌಂದರ್ಯಕ್ಕೆ ಕ್ಷಣಕಾಲ ಮಾರುಹೋದ ಅಪರಾಧಕ್ಕಾಗಿ ಜಮದಗ್ನಿ ತನ್ನ ಮಕ್ಕಳಿಗೆ ರೇಣುಕೆಯ ತಲೆ ಕತ್ತರಿಸಲು ಆಜ್ಞಾಪಿಸುವನು. ಮಕ್ಕಳು ನಿರಾಕರಿಸಿದಾಗ ತನ್ನ ಕೊನೆ ಮಗ ಪರಶುರಾಮನನ್ನು ಕರೆದು ಹೇಳಲು ತಂದೆಯ ಮಾತನ್ನು ಶಿರಸಾವಹಿಸಿ ತನ್ನ ತಾಯಿ ಮತ್ತು ಅಣ್ಣಂದಿರನ್ನು ಕಡಿದು ಹಾಕಿದನು ತಂದೆ ತನಗಿತ್ತ ವರವನ್ನು ಉಪಯೋಗಿಸಿಕೊಂಡು ಮತ್ತೆ ಅವರನ್ನೆಲ್ಲಾ ಬದುಕಿಸಿದನು.

ಹೈಹಯ ರಾಜ್ಯದಲ್ಲಿ ಕಾರ್ತವೀರ್ಯಾರ್ಜುನನು ಬಹಳ ವರ್ಧಿಸಿದ್ದನು. ದತ್ತಾತ್ರೇಯನನ್ನು ಪೂಜಿಸಿ ಅನೇಕ ವರಗಳನ್ನು ಮತ್ತು ಅವನಿಂದಲೆ ಮರಣವನ್ನು ಕೇಳಿಕೊಂಡಿದ್ದನು. ಒಂದು ದಿನ ಪರಿವಾರ ಸಮೇತ ಜಮದಗ್ನಿಯ ಆಶ್ರಮಕ್ಕೆ ಬರಲು, ಋಷಿಯು ಸುರಧೇನು ಸುರಭಿಯ ಸಹಾಯದಿಂದ ಅವರಿಗೆ ರಾಜೋಪಚಾರ ನೀಡಿದನು. ಆದರೆ ಇದರಿಂದ ಈರ್ಷ್ಯೆಗೊಂಡ ಕಾರ್ತವೀರ್ಯನು ಸೇವಕರಿಂದ ಸುರಭಿಯನ್ನು ಎಳದೊಯ್ದನು. ಇದರಿಂದ ನೊಂದ ಜಮದಗ್ನಿ ರಾಮನಿಗೆ ಹೇಳಲು, ಕಾರ್ತವೀರ್ಯನನ್ನು ಕೊಂದು ಸುರಭಿಯನ್ನು ಹಿಂದಕ್ಕೆ ತಂದು ಒಪ್ಪಿಸಿದನು. ಇದರಿಂದ ಮತ್ತೂ ನೊಂದ ಜಮದಗ್ನಿ ಮಗನಿಗೆ ಬ್ರಹ್ಮಹತ್ಯೆಯ ಪಾಪ ಕಳೆಯಲು ಹೇಳುತ್ತಾನೆ. ಇತ್ತ ಅದೇ ಸಮಯದಲ್ಲಿ ಹೈಹಯ ಕುಮಾರರು ತಂದೆಯ ಮರಣದ ಸೇಡಿನಿಂದ ಜಮದಗ್ನಿಯನ್ನು ಕೊಂದು ಹಾಕಿದರು. ರೇಣುಕೆಯ ಆರ್ತನಾದ ಕೇಳಿ ಓಡಿ ಬಂದ ರಾಮ ತಂದೆಯ ದುಃಸ್ಥಿತಿಯನ್ನು ನೋಡಿ ಕ್ರೋಧಾವಿಷ್ಟನಾಗಿ ಕ್ಷತ್ರಿಯ ಕುಲವನ್ನೇ ನಾಶ ಮಾಡುವ ಪಣ ತೊಡುವನು. 21 ಬಾರಿ ಭೂ ಪ್ರದಕ್ಷಿಣೆಗೈದು ಹೈಹಯ ಕುಮಾರರ ಮೊದಲ್ಗೊಂಡು ಕ್ಷತ್ರಿಯರ ನಾಶ ಮಾಡಿದನು. ಸಮಂತ ಪಂಚಕ ಎಂಬ ಕ್ಷತ್ರಿಯರ ರಕ್ತದ ಮಡುವಿನಲ್ಲಿ ಪಿತೃಗಳಿಗೆ ತರ್ಪಣವನ್ನಿತ್ತನು. ತಾನು ಗೆದ್ದ ಭೂಮಿಯನ್ನು ಕಶ್ಯಪಾದಿಗಳಿಗೆ ದಾನಕೊಟ್ಟು, ಶಸ್ತ್ರ ಸಂನ್ಯಾಸ ಮಾಡಿ ಮಹೇಂದ್ರ ಪರ್ವತದಲ್ಲಿ ತಪಃ ನಿರತನಾಗಿರಲು, ಸಮುದ್ರವು ಗೋಕರ್ಣದವರೆಗೆ ಭೂಮಿಯನ್ನು ನುಂಗಿದನು. ತಾಪಸರು ಪರಶುರಾಮನನ್ನು ಪ್ರಾರ್ಥಿಸಲು ತಪಃ ಪ್ರಭಾವದಿಂದ ಉಂಟಾದ ಆಗ್ನೇಯಾಸ್ತ್ರಕ್ಕೆ ಹೆದರಿದ ಸಮುದ್ರಕ್ಕೆ ತನ್ನ ಯಜ್ಞದ ಸ್ರುವವನ್ನು ಬಿಟ್ಟು ಕನ್ನಡ ಜಿಲ್ಲೆ ಸೇರಿದಂತೆ ಕೇರಳ ಎಂಬ ಪ್ರದೇಶವನ್ನು ಉದ್ಧರಿಸಿದನು. ಪರಶುರಾಮನು ಮೊದಲೆ ಶಸ್ತ್ರ ಸಂನ್ಯಾಸ ಮಾಡಿದ್ದರಿಂದ ಕೊಡಲಿಯನ್ನು ಎಸೆಯುವ ಪ್ರಮೇಯ ಬರಲಿಲ್ಲ. ಇದು ಸಾಮಾನ್ಯವಾಗಿ ಪುರಾಣಗಳಲ್ಲಿ ಉಲ್ಲೇಖ ವಾಗಿರುವ ಕತೆ.

– ಬಿಟ್ಟೀರ ಚೋಂದಮ್ಮ ಶಂಭು

# ಸರ್ಪ ಗಂಧ



✦ ಕೌಂಡಿನ್ಯ

**ಧಾರವಾಹಿ -19**

ಅದು ಹುತ್ತಗಳ ಸಂಗಮ !

ಅದನ್ನು ಪರಿಶೀಲಿಸುತ್ತಿದ್ದ ರೇವತಿಗೆ ಕಂಡು ಬಂದಿತು ಮಾನವ ಆಕೃತಿಯ ನೆರಳು !

ನಿಶ್ಯಬ್ದವಾಗಿ ಯಾರೋ ಬಂದಿದ್ದರು !

ರೇವತಿ ಸರಕ್ಕನೆ ಹಿಂತಿರುಗಿದಳು.

ಆದರೆ ತಡವಾಗಿತ್ತು !

ಅವಳ ಕತ್ತಿನ ನರದ ಮೇಲೆ ಬಲಿಷ್ಠ ಹಸ್ತವೊಂದು ಬಲವಾಗಿ ಪ್ರಹಾರ ಮಾಡಿತು !

ತಲೆ 'ಧೀಂ.... ಧೀಂ....' ಎನ್ನುತ್ತಿದೆ !

ಕಣ್ಣುಗಳ ಮುಂದೆ ಕಾಮನ ಬಿಲ್ಲು !

ಗಿರಗಿರನೆ ತಿರುಗುತ್ತಿದೆ ವಿಷ್ಣು ಚಕ್ರ !

ಅವಳು ಎರಡು ಕೈಗಳಿಂದ ತಲೆಯನ್ನು ಹಿಡಿದುಕೊಂಡು ತೂರಾಡುತ್ತಾ 'ದೊಪ್' ಎಂದು ಬಿದ್ದಳು.

ಅವಳಿಗೆ ಪ್ರಜ್ಞೆ ಹೋಯಿತು !

ಅವಳ ಹತ್ತಿರ ಆ ವ್ಯಕ್ತಿ ಬಂದಿತು.

* * *

ಅದು ಎಡತೊರೆಯ ಬಂಗಲೆ ! ರಾತ್ರಿ ಎಂಟು ಗಂಟೆಯ ಸಮಯ. ಬಂಗಲೆಯ ಮಹಡಿಯ ಮೇಲೆ ಇದ್ದ ರೂಮಿನ ಬಾಗಿಲು ಈಗ ನಿಧಾನವಾಗಿ ತೆರೆದುಕೊಂಡಿತು. ಅದು ಪ್ರಸನ್ನನ ರೂಮು ! ಈಗ ಅವನು ಅಲ್ಲಿ ಇರಲಿಲ್ಲ ! ವ್ಯಕ್ತಿಯೊಂದು ರೂಮಿನೊಳಗೆ ಪ್ರವೇಶಿಸಿ ಫ್ರಿಡ್ಜ್‌ನ ಹತ್ತಿರ ಬಂದು ನಿಂತು ಕೊಂಡಿತು.

ಆ ವ್ಯಕ್ತಿಯ ಕೈಯಲ್ಲಿ ಬ್ಯಾಗು ಇದೆ ! ಆ ವ್ಯಕ್ತಿ ಈಗ ಫ್ರಿಡ್ಜ್‌ನ ಡೋರು ತೆಗೆದು ಅದರಲ್ಲಿ ಇದ್ದ ರಮ್ ಸೀಸೆಗಳನ್ನು ಹೊರತೆಗೆಯಿತು ! ಎರಡು ಫುಲ್ ಬಾಟಲ್ ರಮ್ ಸೀಸೆಗಳು ವ್ಯಕ್ತಿ ಬ್ಯಾಗನ್ನು ತೆರೆಯಿತು.

ಆ ವ್ಯಕ್ತಿ ಈಗ ರಮ್ ಸೀಸೆಗಳನ್ನು ಅದಲು ಬದಲು ಮಾಡಿ ಫ್ರಿಡ್ಜ್‌ನ ಡೋರ್ ಕ್ಲೋಸ್ ಮಾಡಿತು.

ಆ ವ್ಯಕ್ತಿ ನಗುತ್ತಿದೆ !

ಮುಖದಲ್ಲಿ ಆನಂದ !

"ಪ್ರಸನ್ನ... ನೀನು ಈ ರಾತ್ರಿ ಸಾಯಲೇ ಬೇಕು ಎಂದು ಮೆಲ್ಲಗೆ ಗೊಣಗಿಕೊಂಡು ಅಲ್ಲಿಂದ ಹೊರಟಿತು.

ಆ ವ್ಯಕ್ತಿ..... ಆ ವ್ಯಕ್ತಿ ಯಾರು?

* * *

ಅವಳು ನೆಲದ ಮೇಲೆ ಅಂಗತ್ತನೆ ಬಿದ್ದಿದ್ದಾಳೆ. ಅವಳ ಸೀರೆಯ ಸೆರಗು ಜಾರಿದೆ !

ಹಾಲಿನ ಕೆನೆಯ ಬಣ್ಣದ ಅಮೃತ ಎದೆಯ ಸೌಂದರ್ಯ ಈಗ ಅರೆನಗ್ನ ದರ್ಶನ ನೀಡುತ್ತಿದೆ !

ರೇವತಿ ಚೆಲುವೆ !

ಅವಳ ಸೌಂದರ್ಯವನ್ನು ತದೇಕ ದೃಷ್ಟಿಯಿಂದ ನೋಡುತ್ತಿದ್ದಾನೆ ಪ್ರಸನ್ನ ! ಸಹನೆ ಕಡಿಮೆಯಾಗುತ್ತಿದೆ.

ಬಯಕೆ ಉಕ್ಕೇರುತ್ತಿದೆ.

ವಿವೇಕ ಕ್ಯಾಕರಿಸಿ ಉಗಿಯಿತು - ಯೂ ಬ್ಲಡಿ ಫೂಲ್.... ಪ್ರಜ್ಞೆ ಇಲ್ಲದೆ ಅಸಹಾಯಕವಾಗಿ ಬಿದ್ದಿರುವ ಹೆಣ್ಣನ್ನು ಕಾಮದ ದೃಷ್ಟಿಯಿಂದ ನೋಡುತ್ತಿರುವೆಯಾ !

ಎಚ್ಚೆತ್ತನು ಪ್ರಸನ್ನ !

ಜೇಪಿನ ಹತ್ತಿರ ಬಂದು ಅಲ್ಲಿದ್ದ ವಾಟರ್ ಕ್ಯಾನನ್ನು ಎತ್ತಿಕೊಂಡು ಬಂದು ನೀರನ್ನು ಸಿಂಪಡಿಸಿದನು.

ಮುಖದ ತುಂಬಾ ನೀರಿನ ಹನಿಗಳು ! ಅವಳು ನರಳಿದಳು ! ನಿಧಾನವಾಗಿ ಕಣ್ಣುಗಳನ್ನು ತೆರೆದಳು.

ಸೂರ್ಯನ ಬಿಸಿಲು ಕಣ್ಣು ಕುಕ್ಕುತ್ತಿದೆ. ಅವಳು ಮುಖಕ್ಕೆ ಕೈಗಳನ್ನು ಅಡ್ಡ ಹಿಡಿದು ಕೊಂಡು ಎದ್ದು ಕುಳಿತು ಕೊಂಡು ಕತ್ತನ್ನು ಹೊರಳಿಸಿದಳು.

ಅಲ್ಲಿ..... ಪ್ರಸನ್ನ ನಿಂತಿದ್ದಾನೆ.

ಯಮ ಭೂತವನ್ನು ಕಂಡಂತೆ ಬೆಚ್ಚಿ ಬಿದ್ದಳು. ಕೂಡಲೇ ಕೋಪ ಉಂಟಾಗಿ ಸರ್ರನೆ ಎದ್ದು ನಿಂತು ಅವನತ್ತ ಕೆಂಗಣ್ಣಿನ ಉರಿ ನೋಟ ಬೀರಿದಳು.

ಪ್ರಸನ್ನನಿಗೆ ಗಾಬರಿಯಾಯಿತು. ಅರೆ.... ಅರೆ ಈ ಹೆಣ್ಣು ಹೀಗ್ಯಾಕೆ ನೋಡುತ್ತಿದ್ದಾಳೆ?

ರೇವತಿ ಕೋಪದಿಂದ "ನೀವು..... ನೀವು... ಇಂತಹ ಹೀನ ಪ್ರಯತ್ನ ಮಾಡುತ್ತೀರ ಅಂತ ಅಂದು ಕೊಂಡಿರಲಿಲ್ಲ. ನನಗೆ ಮೊದಲೇ ಅನುಮಾನ ಬಂದಿತ್ತು."

"ನಾನು... ನಾನು ನಾನೇನು ಮಾಡಿದೆ?"

ರೇವತಿ ಹಲ್ಲು ಕಡಿಯುತ್ತಾ "ನನ್ನನ್ನು... ನನ್ನನ್ನು ಸಾಯಿಸಲು ಪ್ರಯತ್ನ ಮಾಡಿದ್ರಿ!"

ಪ್ರಸನ್ನ ಬೆಚ್ಚಿಬಿದ್ದನು. ಭಯ ಗಾಬರಿಯಿಂದ "ಅರೆ... ಅರೆ... ರೇವತಿ ನೀನು ಏನು ಹೇಳ್ತಾ ಇದ್ದೀಯ ನಾನು ನಿನ್ನನ್ನು ಸಾಯಿಸಲು ಪ್ರಯತ್ನಿಸಿದೆನೆ? ಮೈಗಾಡ್... ಒಳ್ಳೆಯತನಕ್ಕೆ ಇದು ಕಾಲ ಅಲ್ಲ." ರೇವತಿ ಕೋಪದಿಂದ "ನಿಮ್ಮ ನಾಟಕ ಸಾಕು, ನನಗೆ... ನನಗೆ ಗೊತ್ತಿದೆ. ನೀವು... ನೀವು..."

ಪ್ರಸನ್ನ ಕೋಪದಿಂದ "ಸಾಯಬೇಕಿದ್ದ ನಿನ್ನ ಪ್ರಾಣ ಉಳಿಸಿದ್ದು ನಾನು ಮಾಡಿದ ತಪ್ಪು."

ರೇವತಿ ಹುಬ್ಬು ಗಂಟಿಕ್ಕಿದಳು. ಪ್ರಸನ್ನ "ನಿನ್ನನ್ನು ಸಾಯಿಸುವ ಉದ್ದೇಶ ನನಗೆ ಇದ್ದಿದ್ದರೆ ನಿನಗೆ ಪ್ರಜ್ಞೆ ಇಲ್ಲದೆ ಬಿದ್ದಿದ್ದಾಗ ಎರಡೇ ಕ್ಷಣಗಳಲ್ಲಿ ಸಾಯಿಸಿ ಬಿಡುತ್ತಿದೆ. ನಿನಗೆ ಬಹುಶಃ ನೆನಪಿನ ಶಕ್ತಿ ಕಡಿಮೆ ಅಂತ ಕಾಣುತ್ತೆ ರೇವತಿ.

20ನೇ ಪುಟಕ್ಕೆ

ಇಲ್ಲಿಯವರೆಗೆ.........

ರೇವತಿ ಮತ್ತು ದೇವಸ್ಥಾನದ ಪೂಜಾರಿ ನಡೆದಿರುವ ಘಟನೆಗಳ ಬಗ್ಗೆ ಚರ್ಚೆ ಮಾಡುತ್ತಾರೆ. ರೇವತಿ ಸತ್ಯವನ್ನು ಕಂಡು ಹಿಡಿಯುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾಳೆ. ರೇವತಿ ಹುತ್ತದ ಹತ್ತಿರ ಬರುತ್ತಾಳೆ. ಅಲ್ಲಿ ಅಪಾಯ ಕಾದಿರುತ್ತದೆ.

ಮುಂದೆ ಓದಿ.........

# ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯಿಂದ ಶತಮಾನದ ಕೊನೆಯ ಕೈಲ್ ಮುಹೂರ್ತ ಕ್ರೀಡಾಕೂಟ

**ನವೆಂಬರ್ 6, 7 ರಲ್ಲಿ ವರ್ಣರಂಜಿತ ಕಾರ್ಯಕ್ರಮ, ಎಂಟು ಸಾವಿರಕ್ಕೂ ಮಿಕ್ಕಿ ಸೇರಿದ ಗೌಡ ಜನಸ್ತೋಮ. 7 ಸಾವಿರ ವರ್ಷಗಳ ಪುರಾತನ ಇತಿಹಾಸ ಪರಂಪರೆಯ ಸಮಾಜವೇ ಗೌಡ ಸಮಾಜ**

**- ಪ್ರೊ. ಪೂಜಾರಿ ಮೊಣ್ಣಪ್ಪ**

ಇದೇ ನವೆಂಬರ್ ತಿಂಗಳ 6 ಮತ್ತು 7ರಲ್ಲಿ ಶತಮಾನದ ಕೊನೆಯ ಕೈಲ್‌ಮುಹೂರ್ತ ಕ್ರೀಡಾಕೂಟದ ಸಮಾರೋಪ ಸಮಾರಂಭವು ಮಡಿಕೇರಿ ನಗರದ ಮ್ಯಾನ್ಸ್ ಕಾಂಪೌಂಡ್ ಕ್ರೀಡಾಂಗಣದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ಎರಡು ದಿನಗಳಲ್ಲಿ ನಡೆದ ಈ ಕ್ರೀಡಾಕೂಟದಲ್ಲಿ ಸುಮಾರು 8 ರಿಂದ 10 ಸಾವಿರ ಜನರು ಪಾಲ್ಗೊಂಡಿದ್ದರು. ಹಿರಿಯರು, ಕಿರಿಯರು, ಮಹಿಳೆಯಾದಿಯಾಗಿ ಗೌಡ ಜನಸ್ತೋಮವೇ ಹರಿದು ಬಂದಂತಿದ್ದು ನೋಡುಗರ ಮನಸ್ಸಿಗೆ ಮುದ ನೀಡುವಂತಿತ್ತು.

ಸುಮಾರು 7 ಸಾವಿರ ವರ್ಷಗಳ ಇತಿಹಾಸವಿರುವ ಗೌಡ ಜನಾಂಗಕ್ಕೆ ವಿಶಿಷ್ಟ ಪರಂಪರೆ ಇದೆ ಎನ್ನುವ ಅಭಿಪ್ರಾಯವನ್ನು ಸಮಾರೋಪದ ಅಧ್ಯಕ್ಷತೆಯನ್ನು ವಹಿಸಿದ ಹಿರಿಯರು, ಸಾಹಿತಿಗಳು, ಲೇಖಕರು, ಜನಾಂಗದ ಚೈತನ್ಯಮಯರಾದ ಪ್ರೊ. ಪೂಜಾರಿ ಮೊಣ್ಣಪ್ಪನವರು ಘೋಷಿಸಿದರು. ಇಂತಹ ವಿಶಿಷ್ಟ ಸಂಸ್ಕೃತಿಯುಳ್ಳ ಗೌಡ ಜನಾಂಗದ ಆಚರಣೆಗಳು ಎಂದೆಂದೂ ನಶಿಸಬಾರದು. ಕ್ರೀಡಾ ಕೂಟಗಳು ಬಹು ಹಿಂದೆಯೇ ನಡೆಯ ಬೇಕಿತ್ತು. ಆದರೆ ಮುಂದಿನ ಶತಮಾನಕ್ಕೆ ಕಾಲಿಡುವ ಮುನ್ನವೇ ಜನಾಂಗ ಎಚ್ಚೆತ್ತು ಇಂತಹ ಕ್ರೀಡಾಕೂಟಗಳನ್ನು ಆಯೋಜಿಸುತ್ತಿರುವುದು ನಿಜಕ್ಕೂ ನನಗೆ ಸಂತೋಷವನ್ನು ತಂದಿದೆ. ಗೌಡ ಜನಾಂಗದ ಇಂತಹ ಕಾರ್ಯಕ್ರಮಗಳು ಗ್ರಾಮ ಮಟ್ಟದಲ್ಲಿಯೂ, ಹೋಬಳಿ ಮಟ್ಟದಲ್ಲಿಯೂ, ತಾಲ್ಲೂಕು ಮಟ್ಟದಲ್ಲಿಯೂ, ಜಿಲ್ಲಾ ಮಟ್ಟದಲ್ಲಿಯೂ, ರಾಜ್ಯ ಮಟ್ಟದಲ್ಲಿಯೂ ಮತ್ತು ರಾಷ್ಟ್ರ ಮಟ್ಟದಲ್ಲಿಯೂ ಕಾವೇರಿನದಿ ಹರಿಯುವ ರೀತಿಯಲ್ಲಿ ನಿರಂತರವಾಗಿ ನಡೆಯಬೇಕೆಂದರು. ಅಲ್ಲದೇ ಯುಗಾದಿ, ಕಾವೇರಿ ಸಂಕ್ರಮಣ, ದೀಪಾವಳಿಗಳಂತಹ ಹಬ್ಬ ಹರಿದಿನಗಳಲ್ಲಿ ಇಂತಹ ಸಮಾರಂಭವನ್ನು ನಡೆಯಿಸುವುದು ಸರಿಯಲ್ಲ. ಆ ದಿನಗಳಲ್ಲಿ ನಮ್ಮ ಜನಾಂಗದ ಸರ್ವರೂ ಬರುವುದಕ್ಕೆ ಅನಾನುಕೂಲವಾಗುತ್ತದೆ. ಆಟೋಟಗಳಲ್ಲಿ ಪ್ರತಿಯೊಬ್ಬರು ಭಾಗವಹಿಸುವುದಲ್ಲದೆ ಪ್ರಬಂಧ, ಕಥೆ, ಕವನ ಇತ್ಯಾದಿಗಳನ್ನು ಬರೆಯುವ ಹವ್ಯಾಸವನ್ನಿಟ್ಟು ಕೊಳ್ಳಬೇಕು. ಈ ನಿಟ್ಟಿನಲ್ಲಿ ಜನಾಂಗದ ಏಕೈಕ ಪತ್ರಿಕೆ ಕೊಡಗು ಸಂಗಾತಿಯನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾ ಜನಾಂಗದ ಸಂಸ್ಕೃತಿ, ಸಂಪ್ರದಾಯ, ಭಾಷೆ, ಸಾಹಿತ್ಯವನ್ನು ಬೆಳೆಸುವ ಮೂಲಕ ಯುವ ಜನಾಂಗವು ಮುಂದೆ ಬರಬೇಕೆಂದು ಸ್ವಾತಂತ್ರ ಹೋರಾಟಗಾರ, ಪತ್ರಕರ್ತ ವಕೀಲರು ಆಗಿರುವ ಪ್ರೊ. ಪೂಜಾರಿ ಮೊಣ್ಣಪ್ಪನವರು ಅಧ್ಯಕ್ಷ ಸ್ಥಾನದಿಂದ ಯುವಜನಾಂಗಕ್ಕೆ ಕರೆ ನೀಡಿದರು.


ಇಂತಹ ಕಾರ್ಯಕ್ರಮಗಳು ಒಂದೆರಡು ದಿನಗಳಿಗೆ ಸೀಮಿತವಾಗಿರದೆ ನಾಲ್ಕೈದು ದಿನಗಳ ಕಾಲ ನಡೆಯುವುದರ ಮೂಲಕ ಯುವ ಪ್ರತಿಭೆಗಳಿಗೆ ಅದರಲ್ಲೂ ಪುಟ್ಟ ಮಕ್ಕಳಿಗೆ ಸಾಕಷ್ಟು ಅವಕಾಶವನ್ನು ನೀಡಿ ಪ್ರೋತ್ಸಾಹ ಕಲ್ಪಿಸಬೇಕೆಂದು ಮತ್ತು ಮಕ್ಕಳಿಗೆ ನಮ್ಮ ಸಂಸ್ಕೃತಿಯ ಅರಿವನ್ನು ಮೂಡಿಸುವತ್ತ ಹಾಗೂ ಅರೆಭಾಷೆಯನ್ನು ಚಿಕ್ಕಂದಿನಿಂದಲೇ ಕಲಿಸುವಂತೆಯೂ ಸಲಹೆ ನೀಡಿದರು. ಅಲ್ಲದೆ ಇಂತಹ ಕ್ರೀಡಾಕೂಟಗಳು ಸುಗಮವಾಗಿಯೂ ಸಮರ್ಪಕವಾಗಿಯೂ ಮುಂದೆ ನಡೆಯಲೆಂದು ಆಶಿಸಿ ತನ್ನ ಮನದಾಳದ ಇಂಗಿತವನ್ನು ಹೊರಗೆಡಹಿದರು. ಇನ್ನೊಬ್ಬ ಮುಖ್ಯ ಅತಿಥಿ ಹಿರಿಯರು, ಕೃಷಿಕರು ಆದ ಮದೆನಾಡಿನ ಕೊಲ್ಯದ ಸೋಮಯ್ಯ ಅವರು ತಮ್ಮ ಭಾಷಣದಲ್ಲಿ ಯುವಕರಿಗೆ ಪ್ರೋತ್ಸಾಹ ಹಾಗೂ ಗೌಡ ಸಂಸ್ಕೃತಿಗೆ ಮೇರು ಕಿರೀಟ ನೀಡುವ ಕಾರ್ಯಕ್ರಮಗಳು ಹೆಚ್ಚೆಚ್ಚು ಹರಿದು ಬರಲೆಂದು ಹಾರೈಸಿದರಲ್ಲದೇ ಕ್ರೀಡೆಗಳು ಯುವ ಜನಾಂಗಕ್ಕೆ ಪ್ರೇರಣೆ ಮತ್ತು ಅವಕಾಶ ಕಲ್ಪಿಸುತ್ತದೆ. ಅಲ್ಲದೇ ನಮ್ಮ ಸಂಸ್ಕೃತಿ ನಶಿಸದೇ ತಲತಲಾಂತರಕ್ಕೆ ರವಾನೆಯಾಗಬೇಕೆಂದರು.


ಸಮಾರಂಭದಲ್ಲಿ ಮತ್ತೊಬ್ಬ ಮುಖ್ಯ ಅತಿಥಿ ಕೊಡಗು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷ ಊರು ಬೈಲು ಜಯ ಪ್ರಕಾಶ್‌ನವರು ಮಾತನಾಡುತ್ತಾ ಗೌಡ ಜನಾಂಗದ ಅರೆಭಾಷೆಯನ್ನು, ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು. ನಮ್ಮ ಮೂಲಕ ಕಿರಿಯರಿಗೆ ರವಾನೆಯಾಗುವುದರೊಂದಿಗೆ ಇಂತಹ ಕಾರ್ಯಕ್ರಮದ ಸಂದರ್ಭ ಭಾಷೆಯ ಬಳಕೆ ಅತ್ಯವಶ್ಯಕ, ಅಲ್ಲದೆ ನಮ್ಮ ಪ್ರತಿಭೆಗಳಿಂದ ಇತರ ಸ್ಥಳಗಳಲ್ಲಿ, ಬೇರೆ ಭಾಷೆಗಳಲ್ಲಿಯೂ ಕಾರ್ಯಕ್ರಮಗಳು ಮೂಡಿ ಬರಬೇಕು, ಮಮ್ಮಿ ಡ್ಯಾಡಿ ಸಂಸ್ಕೃತಿ ಬಿಡಬೇಕು. ಹುಟ್ಟು ಭಾಷೆ ಅರೆಭಾಷೆಯನ್ನು ತಪ್ಪದೇ ಮಾತನಾಡಬೇಕು. ಶ್ರೀಮಂತ ಬಡವರ್ಗದ ಅಂತರ ಕಡಿಮೆಯಾಗಬೇಕು. ಜನಾಂಗದ ಬಡವರ್ಗಕ್ಕೆ ಹೆಚ್ಚಿನ ಸಹಕಾರ ಶ್ರೀಮಂತರಿಂದ ಹರಿದು ಬರಬೇಕು. ಅಲ್ಲದೇ ಜನಾಂಗ ಏರ್ಪಡಿಸುವ ಇಂತಹ ಕಾರ್ಯಕ್ರಮಗಳಿಗೆ ಎಲ್ಲಾ ರೀತಿಯಲ್ಲಿಯೂ ಸಹಕಾರ ನೀಡುವುದಾಗಿಯೂ ಈ ಸಮಾರಂಭದಲ್ಲಿ ಘೋಷಿಸಿದರು. 8 ಸಾವಿರಕ್ಕೂ ಮೇಲ್ಪಟ್ಟು ನೆರೆದ ಪ್ರೇಕ್ಷಕ ವರ್ಗವನ್ನು ನೋಡಿದಾಗ ನನಗೆ ನಿಜವಾಗಿ ಹೆಮ್ಮೆ ತಂದಿದೆ ಎಂದರು

ಮಗದೊಬ್ಬ ಮುಖ್ಯ ಅತಿಥಿಯಾಗಿ ಶ್ರೀಮತಿ ತೋಟಂಬೈಲು ಪ್ರೇಮ ಆನಂದನವರು ಮಾತನಾಡುತ್ತಾ ಅಕಾಡೆಮಿಯು ನಮ್ಮ ವಿಶಿಷ್ಟ ಸಂಸ್ಕೃತಿಯ ಭಾಷೆಯನ್ನು ಉಳಿಸಿಕೊಂಡು ಮುಂದಿನ ಯುಗಕ್ಕೆ ಕಾಲಿಡಬೇಕು. ಜನಾಂಗದ ಪ್ರತಿಯೊಬ್ಬ ಮಹಿಳೆ ಮುಂದೆ ಬರಬೇಕು. ಸರಕಾರದಿಂದ ನೀಡಲಾಗಿರುವ 33% ಸೀಟು ಹಂಚಿಕೆಯಿಂದ ನಾನಿಂದು ನಿಮ್ಮ ಅತಿಥಿಯಾಗಿ ವೇದಿಕೆ ಮೇಲೆ ಕೂತಿದ್ದೇನೆ. ಮೀಸಲಾತಿಯ ಸದುಪಯೋಗವನ್ನು ಗೌಡವತಿಯರು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವಂತೆ ಕರೆ ನೀಡಿದರು.


## ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯಿಂದ ಶತಮಾನದ ಕೊನೆಯ ಕೈಲ್ ಮುಹೂರ್ತ ಕ್ರೀಡಾಕೂಟದ ಕೆಲವು ದೃಶ್ಯಗಳು
















ಅಂದಿನ ಸಮಾರಂಭದ ವೇದಿಕೆಯಲ್ಲಿ ಜನಾಂಗದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಪ್ರತಿಭಾನ್ವಿತ ವ್ಯಕ್ತಿಗಳಿಗೆ ಈ ಸಂದರ್ಭದಲ್ಲಿ ಶಾಲು ಹೊದಿಸಿ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ರಾಷ್ಟ್ರೀಯ ಓಟಗಾರ ಚಿನ್ನದ ಪದಕ ವಿಜೇತ ಪೂಜಾರಿ ಎಂ. ಆನಂದನವರು, ರಾಷ್ಟ್ರೀಯ ಜೂನಿಯರ್ ಹಾಕಿ ಆಟಗಾರ್ತಿ ಹುಲಿಮನೆ ಮಂಜುಳ ರಾಮಣ್ಣ, ರಾಜ್ಯ ಮಟ್ಟದ ಕೆಸರು ಗದ್ದೆ ಓಟಗಾರ ಹುದೇರಿ ಮನೆ ತ್ಯಾಗ ರಾಜೇಂದ್ರ, ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಕೆಂಗಟಾಡಿ ಪುಟ್ಟಯ್ಯ, ಜಿಲ್ಲಾ ಉತ್ತಮ ದೈಹಿಕ ಪ್ರಶಸ್ತಿ ಪಡೆದ ದಂಬೆಕೋಡಿ ಜಯರಾಮ, ಕೊಡಗಿನ ಪ್ರಥಮ ಮಹಿಳಾ ಪೋಲಿಸ್ ದಾಯನ ಪಾರ್ವತಿ ಅಪ್ಪಣ, ಪ್ರಥಮ ಬಾರಿಗೆ ಜನಾಂಗದಲ್ಲಿ ಟಿ.ಸಿ.ಹೆಚ್ ಕಾಲೇಜು ಸ್ಥಾಪಿಸಿ, ಜನಾಂಗದ ಅನೇಕ ಮಕ್ಕಳಿಗೆ ವಿದ್ಯಾದಾನ ಮಾಡಿ ಕೀರ್ತಿ ತಂದ ಪುಳಕಂಡ ಮುತ್ತಪ್ಪ, ಜಿಲ್ಲಾ ನೆಹರು ಯುವ ಪ್ರಶಸ್ತಿ ಪಡೆದ ಹಾರಂಬಿ ರವಿಕುಮಾರ್ ಮತ್ತು ಪ್ರಾಣವನ್ನು ಲೆಕ್ಕಿಸದೆ ಕಾಲೂರು ಅಬ್ಬಿಧಾರೆ ಹೊಳೆಯ ನೀರಿನಲ್ಲಿ ಕೊಚ್ಚಿ ಹೋದ ಶವವನ್ನು ಹಿಂಬಾಲಿಸಿ, ಪ್ರವಾಹದಲ್ಲಿ ಈಜಿ ಸಫಲರಾದ ಹಾಗೂ ಜಿಲ್ಲಾ ಸಾಹಸಿ ಪ್ರಶಸ್ತಿ ಪಡೆದ ತ್ರಿಮೂರ್ತಿಗಳಾದ ಮಕ್ಕಂದೂರು ಗ್ರಾಮದ ಕುಂಬುಗೌಡನ ಗೋಪಾಲ, ಸೋಮೆಟಿ ಕೆಂಚಪ್ಪ, ಗಣಪತಿ ಸಹೋದರರು ವೇದಿಕೆ ಮೇಲೆ ಆಸೀನರಾಗಿದ್ದರು.

ಕೊಡಗು ಗೌಡ ಸಾಸ್ಕೃತಿಕ ಅಕಾಡೆಮಿಯ ಅಧ್ಯಕ್ಷರಾದ ತುಂತಜಿ ಗಣೇಶ್‌ನವರು ನೆರೆದ ಸರ್ವರನ್ನು ಸ್ವಾಗತಿಸಿದರು. ಕುಮಾರಿ ಜ್ಯೋತಿ ತಂಡವು ಪ್ರಾರ್ಥಿಸಿದರೆ ಕೋಡಿ ಚಂದ್ರಶೇಖರ್‌ರವರು ವಂದನೆಗೈದರು. ಉಪನ್ಯಾಸಕ ಹಾಗೂ ಲೇಖಕ ಬಾರಿಯಂಡ ಜೋಯಪ್ಪನವರು ಮತ್ತು ವಕೀಲರಾದ ಹುದೇರಿ ನಾಗೇಶ್‌ನವರು ಕಾರ್ಯಕ್ರಮವನ್ನು ನಿರೂಪಿಸಿದರು.

ದಿನವಮುಂದಾಗಿ ನಡೆದ ಕ್ರೀಡಾಕೂಟದಲ್ಲಿ ಕ್ರೀಡಾ ಜ್ಯೋತಿಯನ್ನು ಹುದೇರಿ ಗಾನ ರಾಜೇಂದ್ರ ಸಂಗಡಿಗರು ನಗರದಲ್ಲಿ ಪ್ರದರ್ಶನ ಮಾಡಿ, ಕ್ರೀಡಾಂಗಣವನ್ನು ಪ್ರವೇಶಿಸಿದರು. ಕ್ರೀಡಾ ಜ್ಯೋತಿಯನ್ನು ಬೆಳಗ್ಗೆ 9-30ರಲ್ಲಿ ಹುದೇರಿ ತ್ಯಾಗರಾಜೇಂದ್ರ ರವರು ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಉರುಬೈಲು ಜಯಪ್ರಕಾಶ್‌ರವರು ಜ್ಯೋತಿ ಬೆಳಗಲು ಸಹಕರಿಸಿದರು.

ಹಗಲಿಡಿ ನಡೆದ ಕುಟುಂಬವಾರು ಹಗ್ಗ ಜಗ್ಗಾಟದಲ್ಲಿ ಸುಮಾರು 60 ತಂಡಗಳು ಭಾಗವಹಿಸಿದ್ದವು. ಅವುಗಳಲ್ಲಿ ಮಹಿಳಾ ಹಗ್ಗ ಜಗ್ಗಾಟದಲ್ಲಿ ಕಟ್ಟೆಮನೆ ಮಹಿಳಾ ತಂಡವು ಪ್ರಥಮ ಬಹುಮಾನ ಪಡೆದರೆ, ಬಿದ್ರುಮಣಿ ಮಹಿಳಾ ತಂಡವು, ದ್ವಿತೀಯ ಸ್ಥಾನವನ್ನು ಪಡೆಯಿತು. ಪುರುಷರ ಹಗ್ಗ ಜಗ್ಗಾಟದಲ್ಲಿ ಕೆದಂಬಾಡಿ ತಂಡವು ಪೊನ್ನಚನ ತಂಡವನ್ನು ಸೋಲಿಸಿ 2ನೇ ಬಾರಿಗೆ ವಿಜೇತರಾದರು. ಮಕ್ಕಳಿಗೆ ಆಟೋಟಗಳು, ನಿಧಾನವಾಗಿ ದ್ವಿಚಕ್ರ ಚಾಲನೆ ಇದ್ದವು. ಮೊದಲ ದಿನದ ನಿರೂಪಣೆಯನ್ನು ಕಟ್ಟೆಮನೆ ಸೋನ ರಾಮಚಂದ್ರ, ಹುದೇರಿ ತ್ಯಾಗ ರಾಜೇಂದ್ರ, ಪಟ್ಟಡ ಶಿವಕುಮಾರ್‌ರವರು ಮಾಡಿದರೆ, ಗುಡ್ಡೆಮನೆ ವಿಶ್ವರವರ ವೀಡಿಯೋ ಚಿತ್ರೀಕರಣವಿತ್ತು. ಸುಮಾರು 34 ತಂಡಗಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದವು. ಪ್ರೇಕ್ಷಕರ ಮನ ತಣಿಸುವಲ್ಲಿ ಸಫಲವಾದವು

**ಸಂಗಾತಿ ಕಂಡಂತೆ ಮಡಿಕೇರಿ ಕೈಲ್ ಮೂರ್ತ ಕ್ರೀಡಾ ಕೂಟ**

ದಿನಾಂಕ 6ರಲ್ಲಿ ನಡೆದ ಕ್ರೀಡಾ ಕಾರ್ಯಕ್ರಮವು ಪ್ರೇಕ್ಷಕರ ಮನ ತಣಿಸಿದವು. ವಿಶಾಲವಾದ ಮೈದಾನದಲ್ಲಿ ಒಂದೆಡೆ ಸಭಾ ಮಂಟಪವಿದ್ದರೆ, ಮಂಟಪದ ಎಡಭಾಗಕ್ಕೆ ಊಟದ ವ್ಯವಸ್ಥೆಗಾಗಿ ಆರೇಳು ಕುಟುಂಬಸ್ಥರಿಗೆ ಪರವಾನಿಗೆ ನೀಡಿ ಅಂಗಡಿ ಇಡಲು ಅನುವು ಮಾಡಿದ್ದು ಉತ್ತಮವಾಗಿತ್ತು. ಊಟ, ಕಾಫಿ ತಿಂಡಿ, ಉಚಿತವಲ್ಲದಿದ್ದರು ಹಣ ತೆತ್ತರು ಈ ಹಿಂದಿನಂತೆ ನೂಕು ನುಗ್ಗಲು ಮತ್ತು ಅದಕ್ಕಾಗಿ ಸಮಯ ಹಾಳು ಮಾಡುವ ಪ್ರಮೇಯವೇ ಬರಲಿಲ್ಲವೆಂದು ಅಲಲ್ಲಿ ಕೇಳಿಬರುತ್ತಿತ್ತು. ಹಗ್ಗ ಜಗ್ಗಾಟವು ಬಹಳ, ಬಹಳ ಪೈಪೋಟಿಯಿಂದ ಕೂಡಿದ್ದು ಮೈ ರೋಮಾಂಚನ ವಾಗುತ್ತಲಿತ್ತು. ಅದರಲ್ಲೂ ಗೌಡವತಿಯರ ಹಗ್ಗ ಜಗ್ಗಾಟ ಭಾರಿ ಕರತಾಡನಗಳ ಮೂಲಕ ಪ್ರೇಕ್ಷಕ ವರ್ಗವು ಹುರಿದುಂಬಿಸುತ್ತಿತ್ತು, ಹಗ್ಗ ಜಗ್ಗಾಟದ ಸಮಯದಲ್ಲಿ ಮಾತ್ರ ನೂಕು ನುಗ್ಗಲು ವಿಪರೀತವಿದ್ದು ಕುಳಿತು ನೋಡುವವರಿಗೆ ತೊಂದರೆಯಾಗುತ್ತಿತ್ತು. ನಿಧಾನ ಮೋಟರ್ ಸೈಕಲ್ ಚಾಲನೆ ಸಮಯದಲ್ಲಂತು ಪ್ರೇಕ್ಷಕರ ನುಗ್ಗಾಟ ಹೇಳತೀರದು. ಈ ಸ್ಪರ್ಧೆಯಲ್ಲಿ ಯಾವ ಸ್ಪರ್ಧಿಗಳು ಸಹ ಲೈನ್ ಕ್ರಾಸ್ ಮಾಡಿ ಗುರಿಯನ್ನು ಅಡ್ಡ ದಾಟಲಿಲ್ಲವಾದರು ಬಹುಮಾನಕ್ಕೆ ಅರ್ಹರಾಗಿದ್ದು ಕೆಲವರಿಗೆ ಅಸಂತೋಷವನ್ನುಂಟು ಮಾಡಿದ್ದಂತು ನಿಜ. ಕಲ್ಯಾಣ ಮಂಟಪದಲ್ಲಿ ಮುಕ್ತ ಬಾರ್ ಇಟ್ಟಿರುವುದೇನೋ ಸರಿ, ಜನರು ಹುಮ್ಮಸ್ಸಿನಿಂದ ಕುಪ್ಪಳಿಸಿ ಕೋಲಾಹಲವಾಗುವ ಸಂದರ್ಭಗಳೇ ಹೆಚ್ಚು. ಹತ್ತಾರು ಸಾವಿರ ಜನ ಸೇರುವಲ್ಲಿ ಇಂತಹ ಬಾರ್‌ಗಳ ಅವಶ್ಯಕತೆ ಇದೆಯೇ? ಎಂದು ಜನ ಮಾತನಾಡಿಕೊಳ್ಳುತ್ತಿದ್ದರು. ಕ್ರೀಡಾಂಗಣದಲ್ಲಿ ಹಲವಾರು ಮಂದಿ ನಿಶಮತ್ತರಾಗಿ ತೂರಾಡುತ್ತಿದ್ದ ದೃಶ್ಯವನ್ನು ಕಂಡು ಮರುಗಿದ್ದಾರೆ ಹಲವು ಜನರು. ಇನ್ನು ಮುಂದಾಕ್ಕಾದರು ಮುಕ್ತ ಬಾರ್‌ನಿಂದ ದೂರವಿರುವುದು ಸಂಘಟನಾ ದೃಷ್ಟಿಯಿಂದ ಉತ್ತಮವೆಂದು ಹಲವರ ಅಂಬೋಣ. ಹಂದಿ ಗೈಪುಟ್ಟು ಎನ್ನುವ ಕರ್ಕಶ ಪದಪುಂಜ ಮೈಕಾಸುರನ ಬಾಯಿಂದ ಆಗಾಗ ಬರುತ್ತಿದ್ದುದು ಕೇಳುಗರಿಗೆ ಸ್ವಲ್ಪ ಅಸಹ್ಯವೆನಿಸುವಂತಿತ್ತು.

ಕಾರ್ಯಕ್ರಮವನ್ನು ಮಧ್ಯಾಹ್ನಕ್ಕೆ ಮುಗಿಸಿ ನಂತರ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಒತ್ತು ನೀಡಬೇಕೆಂದು ಹಲವರ ಅಭಿಲಾಷೆ. ಜನಾಂಗದ ಭಾಷೆ, ಸಂಸ್ಕೃತಿ, ಆಚಾರಗಳ ಕೆಲವೊಂದು ಕಾರ್ಯಕ್ರಮಗಳು ಚೆನ್ನಾಗಿ ಮೂಡಿಬಂದವು, ಹಿಂದಿ, ಇಂಗ್ಲೀಷ್ ಹಾಡುಗಳ ಸಂಸ್ಕೃತಿಗೆ ಒಗ್ಗದ ಕ್ಯಾಸೆಟ್‌ಗಳ ಅಬ್ಬರ ಕಮ್ಮಿಯಾದಷ್ಟು ಒಳಿತೆನ್ನುವುದು ಕೆಲವರ ಅನಿಸಿಕೆ. ಇಂತಹ ಹಾಡುಗಳ ಪ್ರತಿಭೆಗಳಿಗೆ ಒತ್ತು ಕೊಟ್ಟು ರಾತ್ರಿ 8 ಗಂಟೆಯ ತನಕ ಸಾಂಸ್ಕೃತಿಕ ಕಾರ್ಯಕ್ರಮವನ್ನು ಎಳೆದೊಯ್ಯುವುದಕ್ಕಿಂತ ಸಂಜೆ 5 ಗಂಟೆ

20ನೇ ಪುಟಕ್ಕೆ

# ಪತ್ರ ವಿಭಾಗ :



ಸನ್ಮಾನ್ಯರೇ,

ಕೊಡಗು ಸಂಗಾತಿ ಪತ್ರಿಕೆಯ ಜೀವಾವಧಿ ಸದಸ್ಯತನದ ಡಿ. ಡಿ.ಯನ್ನು ಈ ಪತ್ರದ ಮೂಲಕ ಕಳುಹಿಸಿದ್ದೇನೆ.

ತಮ್ಮ ಅಕ್ಟೋಬರ್ ೧೬ರ ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನ "ಅಗ್ರ ಪಂಕ್ತಿಯಲ್ಲಿರುವ ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜವನ್ನು ಓದಿ ತುಂಬಾ ಸಂತೋಷವಾಯಿತು. ಕಳೆದ ೮ ವರ್ಷದಿಂದ ನಾನು ಈ ಸಮಾಜದ ಉಪಾಧ್ಯಕ್ಷನಾಗಿದ್ದೇನೆ. ನಮ್ಮ ಸಮಾಜದ ಬಗ್ಗೆ ಕೆಲವು ಒಳ್ಳೆಯ ವಿಚಾರವನ್ನು ಬರೆದಿರುವ ಶ್ರೀ ಬಿ. ಡಿ. ಗಣಪತಿಯವರಿಗೆ ಧನ್ಯವಾದಗಳು. ಅವರ ಲೇಖನವು ನಮಗೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರೋತ್ಸಾಹ ಕೊಟ್ಟಂತಾಗಿದೆ. ನಮ್ಮ ಸಮಾಜಕ್ಕೆ ನಮ್ಮದೇ ಆದ ಸ್ವಂತ ಕಟ್ಟಡವಿದ್ದು ಇದರಿಂದ ವರ್ಷಕ್ಕೆ ಸುಮಾರು ೩ ಲಕ್ಷದ ಆದಾಯವಿದೆ. ನಮ್ಮ ಸಮಾಜದ ದಾನಿಗಳಿಗೆ ದಾನ ಮಾಡಿದ ಹಣಕ್ಕೆ Income tax Rebate ಇರುವುದು. ಈ Fecilityಯನ್ನು ಪಡೆದಿರುವ ನಮ್ಮ ಅರೆಭಾಷೆ ಗೌಡರ ಸಮಾಜದ ಪೈಕಿ ಪ್ರಥಮವಾಗಿರಬೇಕು ಎಂದು ನಮ್ಮ ಅಭಿಪ್ರಾಯ.

ನಾವು ಇನ್ನೂ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿರುತ್ತೇವೆ. Ladies & Gents Hostel, ದೊಡ್ಡದಾದ ಸಭಾಂಗಣ ಬಡ ಮಕ್ಕಳಿಗೆ ಸ್ನಾತಕೋತ್ತರ ಅಧ್ಯಯನ ಹಾಗೂ Profesional courseಗಳಿಗೆ Scholerships ಆಗಾಗ ಎರಡು ವರ್ಷಕ್ಕೊಂದಾವರ್ತಿ, ಕುಟುಂಬ ಕೈಪಿಡಿ ಬಿಡುಗಡೆ ಮಾಡುವುದು ಇತ್ಯಾದಿ, ಇತ್ಯಾದಿ.

ಕೊಡಗು ಸಂಗಾತಿಯ ಬಗ್ಗೆ ಹೇಳುವುದಾದರೆ ಹೆಚ್ಚಿನ ಮಂದಿ ನಿಮ್ಮನ್ನು ಕೊಂಡಾಡುವುದು ಅತಿಶಯೋಕ್ತಿಯಾಗಲಾರದು. ಹತ್ತು ಕುಟುಂಬ ಮತ್ತು 18 ಗೋತ್ರದ (ಅರೆಭಾಷೆ ಮತ್ತು ತುಳು) ಗೌಡರ ಅಭಿವೃದ್ಧಿಗಾಗಿ, ಅವರೆಲ್ಲರನ್ನು ಒಂದು ಗೂಡಿಸುವುದಕ್ಕಾಗಿ ತಾವು ಶ್ರಮಿಸುತ್ತಿರುವುದು ನಿಜಕ್ಕೂ ಪ್ರಶಂಸನೀಯ. ಪತ್ರಿಕೆಯು ಸಾಕಷ್ಟು ಮೇಲ್ಮುಖವಾಗಿ ಬೆಳೆದಿದೆ. ತಮ್ಮ ಭಾಷೆಯ ಧಾಟಿ High Standard ಆಗಿರುತ್ತದೆ.

ತಮ್ಮ ಪತ್ರಿಕೆಯ ವ್ಯಾಪ್ತಿಯನ್ನು ತಾವು ಬರೇ ಕೊಡಗಿಗೆ ಶಾಮೀಲಾಗಿರಸದೆ ಹತ್ತು ಕುಟುಂಬ ಹದಿನೆಂಟು ಗೋತ್ರದ ಅರೆಭಾಷೆಯ ಹಾಗೂ ತುಳು ಗೌಡರು ಉತ್ತರದಲ್ಲಿ ನೇತ್ರಾವತಿ ನದಿಯ ದಂಡೆಯಿಂದ ದಕ್ಷಿಣದಲ್ಲಿ ಪಯಸ್ವಿನಿ ನದಿಯ ದಂಡೆಯವರೆಗೂ, ಪೂರ್ವದಲ್ಲಿ ಪಿರಿಯಾಪಟ್ಟಣದಿಂದ ಪಶ್ಚಿಮಕ್ಕೆ ಪಾಣೆ ಮಂಗಳೂರುವರೆಗೂ ಹಿಂದೆ ನೆಲೆಸಿದ್ದ ಹಾಗೂ ಈಗ ಪ್ರಪಂಚದಾದ್ಯಂತ ಹರಡಿರುವ ಗೌಡರಿಗೆ ಮೀಸಲಾಗಿಟ್ಟರೆ ನಮ್ಮ ಗೌಡರಿಗೂ, ನಮ್ಮೆಲ್ಲರ ಗೌಡ ಸಂಗಾತಿ ಪತ್ರಿಕೆಗೂ ಉತ್ತಮ ಭವಿಷ್ಯ ಇರುವುದು. ಬಹು ರಾಷ್ಟ್ರೀಯ ಸಂಸ್ಥೆಯಲ್ಲಿರುವ ನನಗೆ ಹತ್ತು ಹನ್ನೆರಡು ಭಾಷೆಯನ್ನು ಅರಿತು ಮಾತನಾಡಲು ಬಲ್ಲೆಯಾದರೂ ಜರ್ಮನ್ ಮತ್ತು ಚೆಕ್ ಸೇರಿ ಯಾವ ಭಾಷೆಯಲ್ಲೂ ಪಾಂಡಿತ್ಯ ಪಡೆದಿಲ್ಲ. ಅರೆಭಾಷೆ ಜನಾಂಗಕ್ಕೆ ಜಯವಾಗಲಿ.

ಅನಂತರಾಜ ಗೌಡ, ಉಪಾಧ್ಯಕ್ಷರು,
ಕೊಡಗು ಮತ್ತು ದ. ಕ. ಗೌಡಸಮಾಜ, ಬೆಂಗಳೂರು.

## "ಅರೆಭಾಷಿಕರ ಒಂದ್ ಪದ್ದತಿ"
## ಕಾರ್ಣ್‌ವಕ್ಕೆ ಇಸುದ್

ಇದು ಕೂಡ ಗೌಡ ಜನರಲ್ಲಿ ನಡ್‌ಕಂಡ್ ಬಂದ ಒಂದ್ ಪದ್ಧತಿ ತ್ಳಕ್ಕ್ ಈ ಸಂಪ್ರಾದಾಯ ಸಾಧಾರಣ ಎಲ್ಲರ ಮನೇಲಿ ನಡ್‌ಕಂಡ್ ಬರ್‌ವಂತದೆ. ಕಾರ್ಣ್‌ವುಕೆ ಇಸುದು ತೇಳಿರೆ ಗುರ್‌ಕಾರ್ಣವ ಮನೆದೇವರ್ ಮತ್ತೆ ಹಿಂದೆ ಸತ್ತ್ ಹೋದಂತಹ ಅಜ್ಜ, ಅಜ್ಜಿ, ಮುತ್ತಜ್ಜ, ಮುತ್ತಜ್ಜಿ ಕಳಿಗೆತ್ತೇಳಿ ತಿಳ್ದಂತ ಹಿರಿಯವು ಹೇಳುವೆ, ಇದ್ ಸಾಧಾರಣ ದೊಡ್ಡಮನೆ ಇಲ್ಲೆ ಐನ್ ಮನೆಲಿ ಇಸುದು. ಇದರ ಇಸಿಕೆ ಒಂದು ಕುಟುಂಬಲಿ ಹಿರಿಯವು ತಿಳ್ದವು ಇಸುವೆ.

ಇದರ್ನ ಇಸುದು ಕಷ್ಟ ಸುಖ, ತೇಳಿರೆ ಒಂದು ಕೂಸು ಹುಟ್ಟಿರೆ ಇಲ್ಲರೆ ಹೊಸದಾಗಿ ಮದುವೆ ಅದರೆ, ಇಲ್ಲರೆ ಯಾರಾದರೊಬ್ಬ ಸತ್ತ್ ಹೋದರೆ ಅವರ ಹೆಸರ್ ಹೇಳಿ ಕೂಡ ಇಸುವೆ.

**ಪದ್ಧತಿ : ಪ್ರಾರ್ಥಿಸುದು**

ಇದರ ಇಸುದ್ ನಮ್ಮ ಮನೆ ಪದ್ದತಿ **ಹೆಂಗೆ ತೇಳಿರೆ** ಇದ್‌ಕ್ಕೆ ಒಂದು ಹುಂಜಕೋಳಿ ಆಕು. ಅದರ್ನ ಕೊಂದ್ ಸಾರ್ ಮಾಡಕು. ಕಳ್ಳ್ ಇಲ್ಲರೆ ಬ್ರಾಂಡಿ ಆಕು. ನೀರು ದೋಸೆ ಮಾಡಕು. ರೊಟ್ಟಿ ಮಾಡಕು. ಎರಡ್ ಮುರು ತುಂಡ್ ಕೊಡಿ ಬಾಳೆಲೆ ಆಕು. ಮತ್ತೆ ಇದರ್ನೆಲ್ಲ ದೊಡ್ಡಮನೆಗೆ ತಕಂಡ್ ಹೋಗಿ ದೊಡ್ಡಮನೆ ಗುಡ್‌ಸಿ ಸಗಣಿ ನೀರ್‌ಹಾಕಿ ಶುದ್ಧ ಮಾಡಿ ದೇವ್‌ರಿಗೆ ದೀಪ ಇಸುವೆ. ಮತ್ತೆ ಕಾರ್ಣವ್‌ಕ್ಕೆ ಇಸುವ ಮನೆ ಪೂಜಾರಿ ಅಟ್ಟಕ್ಕೆ ಹೋಗಿ ಕಾರ್ಣವ್‌ಕ್ಕೆ ತೇಳಿ ಇರುವ ಮಾಮೂಲಿ ಇಸುವ ಮಣೆನ ತಕಂಡ್ ಬಂದವೆ. ಅದರ್ನ ತೊಳ್ದ್ ಶುದ್ಧ ಮಾಡಿ ನೆಲ್ಲಿಕ್ಕಿ ಅಡಿಲಿ ಇಸುವೆ. ಒಂದು ಕೊಡಿ ಬಾಳೆಲೆನ ನಾಲ್ಕ್ ಕಿಂತ್ ಮಾಡಿ ಮಣೆಲಿ ಇಸುವೆ. ಮತ್ತೊಂದು ಬಾಳೆಲಿ ರೊಟ್ಟಿ, ನೀರು ದೋಸೆ, ಕೋಳಿದ್ ಕರೆಡ, ಪಟ್ಟೆಕಾಯಿ ಒಳ್ಳ ಮಾಂಸದ ತುಂಡು ಹಾಕಿ ಚೂರು ಮಾಡಿ ಕಲಿಸಿವೆ. ಮತ್ತೆ ಈ ಕಲಿಸಿದರ್ನ ಮುರ್ ಕಿಂತ್‌ಗಳ್ಲಿ ಒಂದೊಂದ್ ಕಿಂತ್‌ಲಿ ಒಂದು ತುದಿಂದ ಇನ್ನೊಂದು ತುದಿಗೆ ಮೂರುಮುರ್ ಸಲ ಇಸಕು. ಮತ್ತೊಂದ್ ಕಿಂತ್ ಬಾಳೆಲೆನ ಒಂದು ತುದಿ ಮೂರು ಚೂರು ಮಾಡಿ ಗ್ಲಾಸ್‌ಲಿ ಹೊಯ್ದ್ ಕಳ್ಳ್‌ಗೆ ಕಂತ್‌ಸಿ ಮಣೆಲಿ ಇಸುವೆ. ಮತ್ತೆ ನೆಣೆ ಬತ್ತಿ ಊದ್ ಕಡ್ಡಿ ಹೊತ್ತಿಸಿ ಇಸುವೆ ಇದೆಲ್ಲ ಆದಮೇಲೆ ಎಲ್ಲವು ಅಕ್ಕಿ ತಕಂಡ್‌ವೆ. ಆಗ ಕಾರ್ಣವ್‌ಕ್ಕೆ ಇಸಿದ ಹಿರಿಯವು ಹೇಳಿಕಂಡವೆ. ಈಗ ಕಾರ್ಣವ್‌ಕ್ಕೆ ಇಸಿದ್ ಹೊಸದಾಗಿ ಮದುವೆ ಅದವ್ಕೆ ತೇಳಿ ಗ್ಯಾನಮಾಡಿಕಣೆ.

ನಾವು ಈಗ ಹೇಳಿಕಂಬದ್ ಎನ್‌ತೇಳಿರ್ ನಮ್ಮ ಗುಂಡ ಹೊಸದಾಗಿ ಮದುವೆ ಆಗಿ ನವದಂಪತಿಗಳ ಕೂಡಿ ಕಾರಣವೇಕ್ಕೆ ಇಸಿಕಂಡೋಳೋ. ಮಾಡ್ದ್ ಅಡ್ಗೇಲಿ ಆಗಲಿ ನಿತ್ತಂತ ಪೂಜಾರಿಲಿ ಆಗಲಿ, ಇಕ್ಕಿದ ಎಡೆಲಿ ಆಗಲಿ ಅನೇಕ ತಪ್ಪು ನೆಪ್ಪು ಇರ್ದ್. ಈ ತಪ್ಪುಗಳ್ನೆಲ್ಲ ಉಪ್ಪುಪಾಲಿಸಿ ಈ ನವದಂಪತಿಗಳಿಗೆ ಆಯಿರಾರೋಗ್ಯ

16ನೇ ಪುಟಕ್ಕೆ

# ಕೊಡಗ್ ಗೌಡ ಸಾಸ್ಕೃತಿಕ ಅಕಾಡೆಮಿ (ರಿ)

**ಕೊಡಗ್ ಗೌಡ ಸಾಂಸ್ಕೃತಿಕ ಅಕಾಡೆಮಿ ವತಿಂದ ನವಂಬರ್ ತಾರೀಖ್ 6, 7ರಲ್ಲಿ ಮಡಿಕೇರಿ ಗೌಡ ಸಮಾಜಲಿ ನಡ್ಸಿದ ಕೈಲ್ ಮೂರ್ತ ಆಟೋಟಗಳ್‌ಲಿ ಗೆದ್ದವರ ಹೆಸ್ರ್ ಈ ಕೆಳ್ಗೆನಂಗೆ ಉಟ್ಟು.**

ಸುಮಾರ್ 60 ಗೌಡ ಕುಟುಂಬಗಳ ಗಂಡ್ಸ್‌ರ ತಂಡಗ ಹಗ್ಗ-ಎಳ್ವಾಟಲಿ ಭಾಗವಹಿಸಿ ಕೆದಂಬಾಡಿ ಕುಟುಂಬದ ತಂಡ ಗೆದ್ದತ್ ಇವ್‌ಕೆ ಪಾಡಿಚೆಟ್ಟಿರ ಯತೀಶ್ ಚಿಣ್ಣಪ್ಪ, ಮುತ್ತಾರ್‌ಮುಡಿ ಇವ್ ಬಹುಮಾನನ ಕೊಟ್ಟೊ.

ಎರಡ್ನೆ ಸ್ಥಾನ ಪಡ್ದ ಪೊನ್ನಚ್ಚನ ಕುಟುಂಬದ ತಂಡಕ್ಕೆ ಬಹುಮಾನನ ಪೇರಿಯನ ಜಯಾನಂದ ಚೆಟ್ಟಳ್ಳಿ ಇವ್ ಕೊಟ್ಟೊ.

ಸುಮಾರ್ 25 ಗೌಡ ಕುಟುಂಬಗಳ ಹೆಣ್ಣ್ ಜನ್ರ ತಂಡಗ ಹಗ್ಗ-ಎಳ್ವಾಟಲಿ ಭಾಗವಹಿಸಿ ಕಟ್ಟೆಮನೆ ಕುಟುಂಬದ ತಂಡ ಗೆದ್ದತ್. ಇವ್‌ಕೆ ಕಟ್ಟೆಮನೆ ಕುಟುಂಬಸ್ಥರ ಪರವಾಗಿ ಕಟ್ಟೆಮನೆ ಅಮ್ಮವ್ವ ಮತ್ತೆ ಕಟ್ಟೆಮನೆ ಭವಾನಿ ಬಹುಮಾನನ ಕೊಟ್ಟೊ.

ಎರಡ್ನೆ ಸ್ಥಾನ ಪಡ್ದ ಬಿದ್ರುಪಣೆ ಕುಟುಂಬದ ತಂಡಕ್ಕೆ ಬಹುಮಾನನ ಬಿದ್ರುಪಣೆ ಕುಟುಂಬಸ್ಥರ ಪರವಾಗಿ ಬಿದ್ರುಪಣೆ ಉಲ್ಲಾಶನವ್ ಕೊಟ್ಟೊ.

ಎರ್ಡ್ ಚಕ್ರ ಬೈಕ್ ಓಡ್ಸುವ ಸ್ಪರ್ಧೆಲಿ ಬೈಮನ ನಯನ ಗೆದ್ದತ್. ಎರಡ್ನೆ ಸ್ಥಾನನ ಕುಕ್ಕುನೂರ್ ಸುನೀಲ್ ಪಡ್‌ಕಂಡತ್. ಇವ್‌ಕೆ ಯಾಲದಾಳ್ ಡಾ. ಮನೋಜ್ ಬೋಪಯ್ಯನವ್ ಬಹುಮಾನನ ಕೊಟ್ಟೊ.

ಹೆಣ್ಣ್ ಜನ್ರ ವಿಷದ ಚೆಂಡಾಟಲಿ ಮಡಿಯನ ಯಶೋಧ, ಸುರುನ ಸ್ಥಾನ, ಕಡ್ಯದ ಮಮತ ಸೋಮಣ್ಣ ಎರಡ್ನೆ ಸ್ಥಾನ ಪಡ್‌ಕಂಡೊ ಇವ್‌ಕೆ ಚೈತ್ರ ಎಂಟರ್‌ಪ್ರೈಸಸ್‌ನ ಪರಿವಾರ ವಸಂತ ಕುಮಾರ್‌ನವ್ ಬಹುಮಾನ ಕೊಟ್ಟೊ.

ಗಂಡ್ ಜನ್ರ್‌ಗೆ ಏರ್ಪಾಡ್ ಮಾಡ್ದ 100 ಮೀ ಓಟಲಿ ನಂಗಾರು ಸುಬ್ಬಯ್ಯ ಭುವನೇಶ್ ಸುರುನ ಸ್ಥಾನನ, ಅಮೆ ಮೊಣ್ಣಪ್ಪ ನವೀನ್ ಎರಡ್ನೆ ಸ್ಥಾನ ಪಡ್‌ಕಂಡೊ. ಇವ್‌ಕೆ ಮಂಡಿರ ದೇವಯ್ಯ ಮರ್‌ಗೋಡ್ ಇವ್ ಬಹುಮಾನ ಕೊಟ್ಟೊ.

ಹೆಣ್ಣ್ ಜನ್ರ್‌ಗೆ ಏರ್ಪಾಡ್ ಮಾಡ್ದ 100 ಮೀ ಓಟಲಿ ಬಿರುಮಣನ ಗಿರಿಜ ಚಂಗಪ್ಪ ಸುರುನ ಸ್ಥಾನನ, ಕೈಬಿಲಿ ನೇತ್ರಪ್ರಭು ಎರಡ್ನೆ ಸ್ಥಾನ ಪಡ್‌ಕಂಡೊ. ಇವ್‌ಕೆ ಬೈಮನ ಪೊನ್ನಪ್ಪನವ್ ಬಹುಮಾನನ ಕೊಟ್ಟೊ.

ಕಾಲೇಜ್ ಹೈದಂಗಳಿಗೆ ಏರ್ಪಾಡ್ ಮಾಡ್ದ 100 ಮೀ ಓಟಲಿ ಪುಳಕಂಡ್ರ ಸುದೀಪ್ ಮುತ್ತಪ್ಪ ಸುರುನ ಸ್ಥಾನನ, ಗುಡ್ಡೆಮನೆ ಶೇಖರ್ ಎರಡ್ನೆ ಸ್ಥಾನ ಪಡ್‌ಕಂಡೊ. ಇವ್‌ಕೆ ಪುಳಕಂಡ್ರ ಮುತ್ತಪ್ಪನವ್ ಬಹುಮಾನನ ಕೊಟ್ಟೊ.

ಕಾಲೇಜ್ ಗೂಡೆಗಳ್ಗೆ ಏರ್ಪಾಡ್ ಮಾಡ್ದ 100 ಮೀ ಓಟಲಿ ಹುದೇರಿ ಗಾನ ರಾಜೇಂದ್ರ ಸುರುನ ಸ್ಥಾನನ, ದೇಶ್‌ಕೋಡಿ ಜಂಶ್ರೀ ಗಣಪತಿ ಎರಡ್ನೆ ಸ್ಥಾನನ ಪಡ್‌ಕಂಡೊ. ಇವ್‌ಕೆ ಬಹಮಾನನ ನಡುವಟ್ಟಿರ ಕುಟುಂಬಸ್ಥರ ಪರವಾಗಿ ನಡುವಟ್ಟಿರ ಪಳಂಗಪ್ಪನವ್ ಕೊಟ್ಟೊ.

ಜೂನಿಯರ್ ಕಾಲೇಜ್ ಹೈದಂಗಳಿಗಾಗಿ ಏರ್ಪಾಡ್ ಮಾಡ್ದ 100 ಮೀ ಓಟಲಿ ಬೈಮನ ರಂಜಿತ್ ಸುರುನ ಸ್ಥಾನನ, ಸೆಟ್ಟೆಜನ ಪವನ್ ಎರಡ್ನೆ ಸ್ಥಾನ ಪಡ್‌ಕಂಡೊ, ಇವ್‌ಕೆ ಬಹುಮಾನನ ಬಳಪದ. ಸಿ. ಸೋಮಣ್ಣ ಕಟ್ಟೆಮಾಡ್ ಇವ್ ಕೊಟ್ಟೊ.

ಜೂನಿಯರ್ ಕಾಲೇಜ್ ಗೂಡೆಗಳಿಗಾಗಿ ಏರ್ಪಾಡ್ ಮಾಡ್ದ 100 ಮೀ ಓಟಲಿ ಪಟ್ಟಡ ಸುಮ ವೆಂಕಪ್ಪ ಸುರುನ ಸ್ಥಾನನ, ಕೆಮ್ಮಾರನ ಬಬಿತ ಚಿಣ್ಣಪ್ಪ ಎರಡ್ನೆ ಸ್ಥಾನ ಪಡ್‌ಕಂಡೊ.

ಹೈಸ್ಕೂಲ್ ಹೈದಂಗಳಿಗಾಗಿ ಏರ್ಪಾಡ್ ಮಾಡ್ದ 100 ಮೀ ಓಟಲಿ ದಂಬೆಕೊಡಿ ದಿಗಂತ್ ಸುರುನ ಸ್ಥಾನನ, ಕೂಡಕಂಡಿ ಗಣೇಶ್ ಎರಡ್ನೆ ಸ್ಥಾನನ ಪಡ್‌ಕಂಡೊ.

ಹೈಸ್ಕೂಲ್ ಗೂಡೆಗಳಿಗಾಗಿ ಏರ್ಪಾಡ್ ಮಾಡ್ದ 100 ಮೀ ಓಟಲಿ ಬಾರಿಕೆ ರಶ್ಮಿ ಶಾಂತಪ್ಪ ಸುರುನ ಸ್ಥಾನನ, ಕಾಂಗೀರ ಕೋಮಲ ಶ್ರೀನಿವಾಸ್ ಎರಡ್ನೆ ಸ್ಥಾನ ಪಡ್‌ಕಂಡೊ.

ಮಿಡ್ಲ್ ಸ್ಕೂಲ್ ಹೈದಂಗಳಿಗಾಗಿ ಏರ್ಪಾಡ್ ಮಾಡ್ದ 100 ಮೀ ಓಟಲಿ ಕೂಡಕಂಡಿ ಚೇತನ್ ಸುರುನ ಸ್ಥಾನನ, ಗುತ್ತಿಮುಂಡನ ಶರತ್ ಪೂಣಚ್ಚ ಎರಡ್ನೆ ಸ್ಥಾನ ಪಡ್‌ಕಂಡೊ.

ಮಿಡ್ಲ್‌ಸ್ಕೂಲ್ ಗೂಡೆಗಳಿಗಾಗಿ ಏರ್ಪಾಡ್ ಮಾಡ್ದ 100 ಮೀ ಓಟಲಿ ಸುರುನ ಸ್ಥಾನನ ಬೆಳಿಯಂಡ್ರ ಸರಸ್ವತಿ, ಎರಡ್ನೆ ಸ್ಥಾನನ ಯಾಲದಾಳ್ ಬಿಂದು ಪಡ್‌ಕಂಡೊ.

ಸಣ್ಣ ಗಂಡ್ ಮಕ್ಕಳಿಗಾಗಿ ಏರ್ಪಾಡ್ ಮಾಡ್ದ 50 ಮೀ ಓಟಲಿ ಕುಂಡ್ಯನ ಚರಣ್ ಸುರುನ ಸ್ಥಾನನ, ಜಿತೇಂದ್ರ ಎರಡ್ನೆ ಸ್ಥಾನ ಪಡ್‌ಕಂಡೊ.

ಸಣ್ಣ ಹೆಣ್ಣ್ ಮಕ್ಕಳಿಗಾಗಿ ಏರ್ಪಾಡ್ ಮಾಡ್ದ 50 ಮೀ ಓಟಲಿ ದಬ್ಬಡ್ಕ ಆಶಿತ್ ಸುರುನ ಸ್ಥಾನನ, ಬೊಳಗಲ್ಲು ಗಾನವಿ ಎರಡ್ನೆ ಸ್ಥಾನನ ಪಡ್‌ಕಂಡೊ. ಇವ್‌ಕೆ ಅಕಾಡೆಮಿ ಪರವಾಗಿ ಅಧ್ಯಕ್ಷರಾದ ತುಂತಜೆ ಗಣೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ ಪೂಜಾರಿ ಮೊಣ್ಣಪ್ಪನವ್, ಮುಖ್ಯ ನೆಂಟ್ರ್ ಆದ ಕೊಲ್ಯದ ಸೋಮಯ್ಯನವ್ ಕೊಡ್‌ಗ್ ಜಿಲ್ಲಾ ಪಂಚಾಯತ್ ಅಧ್ಯಕ್ಷ ಊರ್‌ಬೈಲ್ ಜಯಪ್ರಕಾಶ್, ಮಡಿಕೇರಿ ತಾಲೂಕು ಪಂಚಾಯ್ತ್ ಉಪಾಧ್ಯಕ್ಷೆ ತೋಟಂಬೈಲ್ ಪ್ರೇಮ ಆನಂದ್ ನವ್ ಬಹುಮಾನನ ಕೊಟ್ಟೊ.

**ವರದಿ : ಚಂದ್ರಶೇಖರ್ ಕೋಡಿ**

---

**ಕೊಡಗು ಸಂಗಾತಿಗೆ ಶುಭಾಶಯಗಳು**

ಪ್ರೀತಿಯ ಕೊಡಗು ಸಂಗಾತಿ
ಕನ್ನಡ ತಾಯಿಗೆ ಆರತಿಯಾಗಿ
ಕಾವೇರಿ ಮಾತೆಯ ಕೀರ್ತಿಯಾಗಿ
ನಾಡೇ ಮೆಚ್ಚುವ ಪತ್ರಿಕೆಯಾಗಿ ಬಾ ಎಂದು ಸಾರುವ

ಸಬ್ಬಂಡ್ರ ಶರತ್ ಕುಮಾರ್, ಮಕ್ಕಂದೂರು

# ಅರೆಭಾಷೆ ತಬ್ಬುಲಿ : ಇಂಗ್ಲೀಷ್ ಹೆಬ್ಬುಲಿ

ಒಂದ್ಸಲ ಮಡಿಕೇರಿಲಿ ಕೆಳಗಿನ ಗೌಡ ಸಮಾಜಲಿ ನಮ್ಮ ಸಂಬಂಧಿಕರ ಮದುವೆ ನಡೀತಿತ್ತ್. ನನ್ನ ಜೊತೆಗೆ ಯಾರ್ ಇಲ್ಲದರಂದ ನಾನ್ ಒಬ್ಬಳೆ ಹೋಗ್ತಾ ಇದ್ದೆ. ಸೂರ್ಯ ನೆತ್ತಿ ಮೇಲೆ ಇದ್ದರಂದ ಏನೋ ಉರಿಬಿಸಿಲ್‌ಲೀ ನಡಿಯೊದೇ ಕಷ್ಟ ಆಗಿತ್ತ್. ಹೊತ್ತ್‌ನು ಮೀರ್‌ದರಂದ ರಭಸಲೀ ನಡೀತಿದ್ದೆ ಹೆಂಗೋ ಗೇಟ್ ಹತ್ರ ತಲುಪುಕನ ಅಲ್ಲೊಂದು ಕೂಸು ನಿತ್ತ್‌ಕಂಡ್ ಮರ್ಡ್‌ತಾ ಇತ್ತ್. ನೋಡಿಕ್ಕೊ ಮುದ್ದು ಮುದ್ದು ಆಗಿಟ್ಟು. ಯಾರಾದರ್ ಅಪಹರಿಸಿ ತಂದುಬುಟ್ಟೊನಾ. ದಾರಿತಪ್ಪಿ ಬಂದು ಬಿಟ್ಟುಟ್ಟೊ ಅಥವಾ ಭಿಕ್ಷುಕರ ಕೂಸಾ ಹಂಗೂ ಕಾಂಬಲೆ. ಮದುವೆಗೆ ಬಂದಪ್ಪು ಆಗಿರವನಾ. ಹಿಂಗೆ ನನ್ನಲ್ಲಿ ಹಲವು ಪ್ರಶ್ನೆಗ ಏಳಿಕೆ ಶುರಾತ್. ನಮ್ಮಾವರ್ದ್ದೆ ಮದುವೆ ತಾನೆ. ಕೂಸುನ ಹತ್ರ ಹೋಗಿ ಅರೆಭಾಷೆಲೇ ಮಾತಾಡ್ಸಿದೆ ಯಾಕೆ ಪುಟ್ಟಿ ಅಳ್ತಾ ಒಳಾ ತಾಕೇಳ್ದೆ. ಕೂಸು ಜೋರು ಮರ್ಡ್ಕೆ ಸುರುಮಾಡ್ತ್. ನನ್ನ ಕೈ ಕೂಸುನ ಬಾಚಿ ಎತ್ತಿಕಣ್ತ್. ನನ್ನ ಮನ್ಸ್ ಸಮಾಧಾನ ಆಗದೇ ಪುನ ಕೇಳ್ದೆ ನಿನ್ನ ಅಮ್ಮಾ ಎಲ್ಲಿ? ನಂಗೆ ಅಮ್ಮಾನೆ ಇಲ್ಲೆ. ಅಯ್ಯೊ ನನ್ನ ಕರಳ್ ಒಂದಕ್ಕೊಂದು ಸುತ್ತಿಕಂಡಂಗೆ ಆತ್. ಈ ಉರಿಬಿಸಿಲ್‌ಲೀ ನಡುರಸ್ತೇಲೀ ಈ ತಬ್ಬಲೀ ಕೂಸು. ನನ್ನ ಕಣ್ಣ್‌ಂದ ನೀರ್ ತಾನಾಗಿಯೇ ಹರಿಯಕ್ಕೆ ಸುರಾತ್ ಊಟದ ಹೊತ್ತದರಂದ ಜನರ ಓಡಾಟನೂ ಕಡಿಮೆ ಆಗಿತ್ತ್. ನಾನ್ ರೆಕ್ಕೆ ಇಲ್ಲದ ಹಕ್ಕಿನಂಗೆ ನಿತ್ತ್‌ಕಂಡ್ ಗ್ಯಾನ ಮಾಡ್ತಾ ಇದ್ದೆ. ಈ ಕೂಸುನ ಬಾಯಿಂದ ಇಂಥಾ ಮಾತ್ ಕೇಳ್‌ಕನ ಯಾರಿಗೆ ತಾನೇ ಬೇಜಾರಗದೆ ಇದ್ದದ್ದೇ ಅಷ್ಟ್ರಲ್ಲಿ ಹಿಂದೆಂದ ಗಂಟೆ ಶಬ್ದ ಕೇಳ್ತ್. ಕೂಸು ಆ ಕಡೆ ಕೈ ಮಾಡಿ ತೋರ್ಸಿತ್. ಕೂಸ್‌ನ ತುಟಿ ಒಣಗಿದರ ಕಂಡ್ ನನ್ನ ಹತ್ರಾ ಇದ್ದಾ ಹುಡಿ ಪೈಸೆಗಳನ್ನ ಹೆರ್ಕಿ ಒಂದು ಐಸ್‌ಕ್ರೀಮು ಕೊಡ್ಸಿದೆ. ಕೂಸ್ ನಿತ್ತ್‌ಕಣ್‌ರಳಿಸಿ ತಿನ್ತಾ ಇತ್ತ್. ನಾನ್ ನನ್ನ ಮುಖನೊಮ್ಮೆ ಚೌಕಲಿ ಉಜ್ಜಿ ಸರಿ ಮಾಡ್ತಾ ಇದ್ದೆ. ಅಷ್ಟೊತ್ತಿಗೆ ಕಟ್ಟಡದ ಮೆಟ್ಟಲು ಇಳಿದ್ ಒಂದ್ ಹೆಂಗ್ಸ್ ನನ್ನ ಕಡೆ ಬರ್ತಾ ಇತ್ತ್. ಬಾಕನೆ ಶ್ರೀಮಂತಿಕೆ ಎದ್ದ್ ಕಾಣ್ತಿತ್ತ್. ನನ್ನ ಹತ್ರ ನಿತ್ತಿದ್ದಾ ಕೂಸೂ ಒಮ್ಮೆಗೆ ಮಮ್ಮಿ.... ತಾ ಆ ಕಡೆ ಓಡ್ತ್. ನಾನ್ ಗೇಟ್‌ಗೆ ಕಟ್ಟೆಯಾಗಿ ನಿತ್ತ್‌ಬುಟ್ಟೆ ಮತ್ತೆ ವಿಚಾರ್‌ಸ್‌ಕನ ಗೊತ್ತಾತ್ ಆ ಕೂಸು ಐಸ್‌ಕ್ರಿಮುಗೆ ಹಠ ಮಾಡ್ಕಿಂಡ್ ಅಲ್ಲಿ ನಿತ್ತಿತ್. ಕೂಸಿಗೆ ಅರೆಭಾಷನೇ ಗೊತ್ತ್ಲೆ ಅಪ್ಪಾ ಅಮ್ಮ ತೇಳ್ರೂ ಸಹ ಗೋತ್ತ್ಲೆತಾ ಈಗ ಹೇಳಿ ಉಟ್ಟಾಣ ಉರಿಬಿಸಿಲ್‌ಲೀ ನಡುರಸ್ತೇಲಿ ತಬ್ಬಲಿಗ ಯಾರ್? ನಾನ್ ಮತ್ತೆ ನನ್ನ ಬಡ ತಬ್ಬುಲಿ ಅರೆ ಭಾಷೆ ತಾನೆ !

ಅಣ್ಣೆಚೇರಾ ಭಾರತಿ ಸೋಮಣ್ಣ, ಮಕ್ಕಂದೂರು

14ನೇ ಪುಟದಿಂದ

ಭಾಗ್ಯ ಸಂಪತ್ತ್‌ನ್ ಕೊಟ್ಟ್, ಹೋದಲ್ಲಿ ಬಂದಲ್ಲಿ ಈ ನವದಂಪತಿಗಳಿಗೂ, ನೂರಾರು ಸಂಸಾರಕ್ಕೂ, ದನಕರುಗಳಿಗೂ, ಬಿತ್ತು ಬೆಳೆಗೂ ಯಾವುದೆ ಒಂದ್ ತೊಂದರೆ ಕೊಡದೆ ಮುಡ್ದ್ ಬಾಡದಂಗೆ ಈ ದೀವಿಗೆ ಹೆಂಗೆ ಬೆಳಗಿದೆ ಅದೇ ರೀತೀಲಿ ಬೆಳಗಿಸಕು ತೇಳಿ, ಕುಲ ದೇವರ್, ತಿರುಪತಿ ವೆಂಕಟರಮಣ, ಇಗ್ಗುತ್ತಪ್ಪ, ಕಾವೇರಮ್ಮ ಮತ್ತೇ ತ್ರೀಮೂರ್ತಿಗ ಇದ್ದ್ ಬೆಳಗಿಸಕು ತೇಳಿ ಅಡ್ಡ ಬಿದ್ದ್ ಬೇಡಿಕಂಡವೆ. ತೇಳಿ ಹೇಳಿ ಕಂಡ್ ಎಲ್ಲವು ಅಕ್ಕಿ ಹಾಕಿ ಕೈಮುಗ್ದ್ ಅಡ್ಡ ಬಿದ್ದ್‌ವೆ. ಇದೆಲ್ಲ ಆದಮೇಲೆ ಎರಡ್ ನಿಮಿಷ ತಿರುಗಿ ನಿಂತವೆ. ಮತ್ತೆ ದೊಂಡೆಲಿ ಒಂತರ ಸದ್ದ್ ಮಾಡಿ ತಿರ್ಗಿ ಕೈಮುಕ್ಕಂಡವೆ. ಮತ್ತೆ ಹಿರಿಯರ ಕೈ ಕಾಲ್ ಹಿಡ್ಕಂಡವೆ.

ಮತ್ತೆ ಆ ಮಣೆಲಿ ಇಸಿದರ್ನ ಅಟ್ಟಲಿ ತಕಂಡ್ ಹೋಗಿ ಇಸಿವೆ. ಕಡೆಗೆ ಬಾಳೆಲೆಲಿ ಬಾಕಿ ಆದಾರ್ನ ವೈಸಾದ ಅಜ್ಜಂದ್‌ರ್ ಅದರೆ ಮಕ್ಕಳ್ನ ಕರ್ಕಂಡ್ ತಿಂದ್ ಗ್ಲಾಸ್‌ಲಿ ಇಸಿದ ಕಳ್ಳ್‌ನ ಕುಡ್ಕಂಡವೆ. ಮತ್ತೆ ಅಲ್ಲಿದ್ನವು ಎಲ್ಲಾ ದೊಡ್ಡ ಮನೆಲಿ ಗದ್ದಳ ಉಂಡ್ ಕಳ್ಳ್‌ಕುಡ್ದ್ ತಿಂದ್ ಗೌಜಿಯಾಗಿ ಅವರವರ ಮನೆಗೋಗಿ ಮಲ್‌ಗ್‌ವೆ.

ಹಿಂಗೆ ಇಂದ್ ಕೂಡ ಗೌಡ ಜನಾಂಗಲಿ ಕಡ್ಡಾಯವಾಗಿ ಕಂಡ್ ಬರುವಂತಹ ಒಂದ್ ಪದ್ಧತಿ. ಕೈ ಬುಡಿಕಾಗದ್.

ನವೀನ್ ಕುಮಾರ್, ಭಾಗಮಂಡಲ

## ಹೋ ನೀನ್‌ರ

ಕೊ - ಟ್ಟದ್ ಅಡ್ರಾಸ್ ಮತ್ತೆ 120 ರೂಪಾಯಿ ಮಾತ್ರ

ಡ - ಗ್ಗತ ಬಾಗ್ಲ್ ಸದ್ದ್ ಆತ್ ಹೋಗಿ ನೋಡ್ದ್

ಗು - ರುತು ಸಿಕ್ಕಿತ್‌ಲೆ ಯಂತದ್‌ತ

ಸ - ರಿ ತೇಳಿ ಬಿಡ್‌ಸಿ ಓದಿದೆ.

ಂ - ಹೋ ನೀನಾ ಕುಶಿ ಆತ್

ಗಾ - ಬರಿ ಆಗ್ ಬಡಿ ನಾನೇ

ತಿ - ಳ್ಕಂಡೆ ನಿನ್ನ ವಿಷಯನ

ಸ - ಕ್ಕರೆ ನಂಗೆ ಇರುವ ನಿನ್ನನ್ನ

ವಿ - ಷಯ ಗೊತ್ತಾಗಿರ್ದು ಅಲ್ಲಾ

ತಾ - ಳಿ ಕಣಿ ಅವಸರ ಬ್ಯಾಡ

ನಿ - ನ್ ನಂಗಾಗಿ ಬಂದೊಳ

ಲ - ವ ಲವಿಕೆಯಿಂದ

ಯ - ಸ್ಟ್ ದೂರಂದ ಬಂದ್ ನನ್ನ ಹುಡ್ಕಿಯೋಳ

ಮೈ - ಯಿ ಮರ್‌ತ್ ಇದ್ದನೆ ನಿನ್ನೊಟ್ಟಿಗೆ.

ಸು - ಖ ಶಾಂತಿ ಇಲ್ಲದ ಬದ್ಕ್‌ಗೆ ಹೊಸ ಬೆಳ್ಕ್ ತಂದ್

ರು - ಚಿ ಶುಚಿಯಾಗಿ ಬಂದ ನನ್ನ ಸಂಗಾತಿ

ನನ್ನ ಕೊಡಗು ಸಂಗಾತಿ

ಕುಂಜಿಲನ ರಾಜ್‌ಕುಮಾರ್ ಕುಂಬಳದಾಳ್ ಗ್ರಾಮ

## ಭಾವಂಗೆ ಶನಿದೆಸೆ

ಹುತ್ತೆರಿ ಹಬ್ಬಕ್ಕಿಂತ ಎರಡ್ ದಿನ ಮುಂದೆ ನನ್ನ ಭಾವ ಬೆಂಗಳೂರ್‌ಂದ ಬಂದುಟ್ಟು. ಆಗ ಸಾಯಂಕಾಲ 6 ಗಂಟೆ ಆಗಿತ್ತ್ ಅವನ ಊರಿಗೆ ಹೋಗುವ ಲಾಸ್ಟ್ ಬಸ್ಸ್ 5-30 ಗಂಟೆಗೆ ಹೋಗಿಬುಟ್ಟುಟು. ಇನ್ನ್ ಏನ್ ಮಾಡುದಪ್ಪತ ಗ್ಯಾನ ಮಾಡ್ತಾ ಇರ್‌ಕನ, ಅದೇ ಊರ್‌ದ್ ಒಂದೇ ಜೀಪ್, ಜೀಪ್ ತುಂಬ ಜನರ್‌ನ ತುಂಬಿಸಿಕಂಡ್ ನಿಂತಿತ್ತ್‌ಗಡ.

ಹುತ್ತೇರಿ ಸಂತೆಗೆ ಬಂದ್ದಿದ್ದ ಜನ ಅವರವರ ಸಾಮಾನ್‌ಗಳ್ನ ಜೀಪ್‌ಲಿ ತುಂಬಿಸಿಕಂಡ್, ಗಂಡ್‌ಸ್‌ಗ ತಮಿಗೆ ಬೇಕಾಸ್ಟ್ ಲೋಡ್ ಆಗಿ ಕುದ್ದಿದ್ದೊಗಡ. ಆಗ ಡ್ರೈವರ್ ಬಂದ್ ಇನ್ನ್ ಯಾರಾರ್ ಬಾಕೆ ಒಳೊನಾ ತೇಳಿಕಂಡ್ ಜೀಪ್ ಸ್ಟಾರ್ಟ್ ಮಾಡ್‌ತ್‌ಗಡ. ಆಗ ಈ ಬೆಂಗ್‌ಳೂರ್ ಭಾವ ನಾನ್ ಬಸ್ನೆ ಮಾರಾಯತೇಳಿ ಓಡಿ ಬಾತ್‌ಗಡ.

ಇವ್ನ ಹೆಂಗೆ ಹತ್ತುಸುದಪ್ಪತ್ತೇಳಿ ಹಿಂದೆ ಒಂದ್ ಕಾಲ್ ಹಾಕಿಕೆ ಸಹ ಜಾಗ ಇಲ್ಲೆ. ಇನ್ನ್ ಈ ಜೀಪ್ ಬುಟ್ರೆ ನಾಳೆನೆ ಬಸ್ಸ್, ಜೀಪ್‌ಲಿದ್ದ ಎಲ್ಲವೂ ಹೋದು ಆ ಊರಿಗೆ. ಬಸ್ಸ್ ಹೋದರೆ ಎಂಟ್ ಮೈಲಿ ನಡೆಯಕು. ಇಂವ ಒಬ್ಬನ ಹೆಂಗಾರ್ ಹತ್ತಿಸಿ ಬುಡೊನೊತ ಹೇಳಿ, ಡ್ರೈವರ್ ಇಳ್ದ್, ಡ್ರೈವರ್ ಕೂರುವ ಸೀಟ್‌ಂದಾಗಿ ಹಿಂದ್‌ಗಡೆಗೆ ಬೆಂಗ್‌ಳೂರ್ ಭಾವನ ಹತ್ತ್‌ಸಿಕ್ಕಂಡೊ.

ಆಗ ಬೆಂಗ್‌ಳೂರ್ ಭಾವ ಬ್ಯಾಗ್‌ನೆಲ್ಲ ಹೆಂಗೆಂಗೊ ಮಾಡಿ ಹಿಂದೆ ಹಾಕಿ, ತಲೆ ಕೈನೆಲ್ಲ ನುಗ್ಸ್‌ಸ್ ತಿರ್‌ಕನ ಭಾವನ ಕುಂಡಿ ಜೀಪ್‌ನ ಸ್ಟೇರಿಂಗ್‌ಗೆ ಮುಟ್ಟಿಹೋತ್‌ಗಡ ಜೀಪ್ ಇಳಿಜಾರ್‌ಲಿ ನಿಂತ್‌ಕಂಡಿದ್ದರ್‌ಂದ ನ್ಯೂಟ್ರಲ್‌ಲಿ 2 ಫರ್ಲಂಗ್‌ನಷ್ಟ್ ಮುಂದೆ ಹೋಗಿ ಅಲ್ಲಿ ನಿಂತಿದ್ದ ಒಂದ್ ಕಾರ್‌ಗೆ ಕುಟ್ಟಿತ್ತ್‌ಗಡ.

ಜೀಪ್‌ದ್ ಡ್ರೈವರ್ ಒಂದ್ ಕೈಲಿ ಸ್ಟೇರಿಂಗ್ ಹಿಡ್‌ಕಂಡ್ ಜೀಪ್‌ನೊಟ್ಟಿಗೆ ಓಡಿ ಬರ್ತಾ ಇತ್ತ್‌ಗಡ ಅವಂಗೆ ಎಷ್ಟಾದರ್ ಜೀಪಿಗೆ ಹತ್ತಿಕೆ ಆತ್‌ಲೆಗಡ. ಈ ಜೀಪ್ ಕಾರಿಗೆ ಕುಟ್ಟಿದಂಗೆ ಕಾರ್‌ನವ್ರು, ಮತ್ತೆ ಜೀಪ್‌ಲಿ ಇದ್ದ ಜನ ಎಲ್ಲ ಸೇರಿಕ್ಕಂಡ್ ಬೆಂಗ್‌ಳೂರ್ ಭಾವಂಗೆ ಸೆರಿ ಹೊಡ್ದ್ ಮೈಯೆಲ್ಲ ಹಣ್ಣ್‌ಕಾಯಿ ನೀರ್‌ಕಾಯಿ ಮಾಡಿ, ಅವ್ನ ಹತ್ರ ಇದ್ದ ದುಡ್ಡ್‌ನೆಲ್ಲ ಕಿತ್ತ್‌ಕಂಡ್ ಕಾರ್‌ನವಂಗೆ ಕೊಟ್ಟ್ ಕಳ್‌ಸಿದೊಗಡ.

ಇಷ್ಟೆಲ್ಲಾ ಆದ ಮ್ಯಾಲೆ ಭಾವ ಅವನ ಮನೆಗೆ ಹೋಗದೆ ನೆಟ್ಟಂಗೆ ನಮ್ಮನೆಗೆ ಬಾತ್.

ಬಟ್ಟೆ ಎಲ್ಲ ಹರ್‌ಕ್ಕಂಡ್‌ದ್ದ ಭಾವನ ನೋಡಿ ಇದೇನ್ ಭಾವ ನಿನ್ನ ಅವಸ್ಥೆತ ಕೇಳ್‌ಕನ, ಹಿಂಗೆ-ಹಿಂಗೆ ಆತ್‌ತ ನಡ್‌ದದರ್ನ ಎಲ್ಲಾ ಹೇಳಿ ಏನ್ ಮಾಡ್‌ದು ಎಲ್ಲ ನನ್ನ ಹಣೆಬರಹ, ಮತ್ತೆ ಈಗ ನಂಗೆ ಶನಿದೆಸೆ ನಡಿತಾ ಇರ್‌ದು. ಅದ್ಕೆ ಹಿಂಗೆಲ್ಲಾ ಆಗ್ತಾವ್ಟುಟ್ಟುತ ಹೇಳ್ತ್, ನಾವ್ ಎಂತರ ಹೇಳ್ದು. ನಿಮಿಗೇನಾದರ್ ಹೇಳಿಕ್ಕೆ ಆದ್ದೈನೊ?

ಯಾಲದಾಳು ಚಂದ್ರಕಲಾ, ಮಡಿಕೇರಿ

## ಇಸ್ಪೇಟಾಟ

ಒಂದು ದಿನ ರಜೆ ಮಾಡಿ. ನಾವೆಲ್ಲಾ ಒಂದ್ ಪಾರ್ಟಿಂಗೆತೇಳ್ರೆ ನಾಕು ಜೆನೆಗ ಸೇರ್ದು ಉಟ್ಟಲೆ. ನೀವ್ ಬ್ಯಾರೇನೂ ತೀಳ್ಕಂಬದು ಬ್ಯಾಡ. ಅದ್ ಅತ್ತ ಅರಳೀಕಟ್ಟೇನೂ ಅಲ್ಲ. ಇತ್ತ ಹೈದ ಗೂಡೆನೂ ಸೇರ್ದೂಂತೂ ಅಲ್ಲ. ನಮ್ಮ ಪಾರ್ಟಿಗ ಒಳಲೆ. ನಾವ್‌ತ್ತೇಳ್ರೆ ಮಹೇಶ್ ಸುರೇಶ್, ಕರುಣಾಕರನ್, ಮುರ್‌ಗನ್ ಇದ್ ನಾಕು ಜೆನಗಾ ಕಾಸಿಗೆ ಆಡ್ತಿದ್ದೊ. ನಾನ್ ಹಾಸಿಗೇಲಿ ಮಲ್ಕಂಡು ನೋಡ್ತಾ ಇರ್ಕನಾ, ನಾವ್ ಇಸ್ಪೀಟು ಅಡ್ನಾರಾಂತೇಳ್ಕಂಡು ನನ್ನನ್ನೂ ಕರ್ದೊ.

ನಂಗೆ ಮಾತ್ರ ಈ ಇಸ್ಪೀಟ್ ಗಿಸ್ಪೀಟುತಾ ಪಂಡ್‌ಲೇ ಆದುಲೇ. ಯಾರ್‍ಯಾರ್ ಆಡ್ದುಂತೂ ಕಂಡರೆ ಸಾಕು ನಂಗೆ ಇಲ್ಲದ ಪಿತ್ತಸ ನೆತ್ತಿಗೇರ್ದೆ. ನನ್ನ ಪಾರ್ಟಿಯವ್ ಇಂವ ಏನ್ ಮಹಾಂತ ಹೇಳಕಂಡ್ ನೀ ಆಡಿಕೆ ಬಾರಾ.. ಇಲ್ಲದೆ ಹೋದರೆ ನೋಡ್ ನಿಂಗೆ ಕಲ್ಸಿನೆ ಬುದ್ಧಿತಾ. ನನ್ನ ಐಸ್ಕಾಂತ ನಂಗೆ ಎಲ್ಲಾ ಎಳ್ಕಂಡೊ. ನಂಗೆ ಬುದ್ಧಿ ಕಲ್ಸುದು ಇರ್ಲಿ. ನನ್ನ ಜೀವಮಾನಕ್ಕೆ ಒಂದೇ ಸಾರಿ ಆಡಿಕೆ ಬಾದು. ಇನ್ನ್ ಎಲ್ಲಾರ್ ನನ್ನ ಕರ್ದು ಬುಡಿ. ಆ ಬುದ್ಧಿನೇ ನಿಮ್ಗೆ ಕಲ್ಸಿನೆ ತಾ ಹೇಳ್ಕಂಡು ಆಡಿಕೆ ಕುದ್ದೆ. ಆ ಜೂಜು ಆಟ ಉಟ್ಟಲೆ. ಒಮ್ಮೆ ಜೂಜು ಆಡ್ರೆ ಅದರ್ಲಿ ಜೋಜೋ ಬರುವ ಮಟ್ಟ ಆಡುವೆ. ಅದಿರ್ಲಿ.

ನಾನು ಹಂಗೆ ಹಿಂಗೆ ಆಡಿಕೆ ಕುದ್ದೆ. ಮೊದ್ಲಸಲನೇ ಹತ್ತು ರೂಪೈಗೆ ಆಟ ಆಡ್ದೆ. ನಂಗೆ ಏಕ್‌ಪೂಕ್ ಗೊತ್ತಿಲ್ದೆ, ಹತ್ತು ರೂಪೈನೂ ಹೋತು. ನಂಗೆ ಹಿಂಗೆ ಮೂರ್‌ಲ್ನಾಕು ಸಾರಿ ದುಡ್ಡು ಕಟ್ಟಿದೆ ಎಲ್ಲಾ ಹೋತು. ನಾನ್ ಸೋತರೂ ನಂಗೆ ಇನ್ನೊಮ್ಮೆ ಗ್ಯಾರಂಟಿ ಬಾದ್‌ತ ಪುನ ಕಟ್ಟಿದೆ. ನಂಗೆ ಅತ್ತ ಆಡಿಕೆ ಕುದ್ದಂಗಲ್ಲ, ಇತ್ತ ಎದ್ದಂಗಲ್ಲ ಹಂಗೆ ಆಗಿತ್ತ್. ಮತ್ತೆ ಆಡಿಕೆ ಕುದ್ದದೇ ಕುದ್ದದು 100 ರೂಪೈ ಬರೋಕಾ! ನಂಗೆ ಖುಷಿ ಆಗಿ ಬೊತ್ತ್. ಆದ್ರೂ ತೋರ್ಸಿಕಂತ್ಲೆ. ಮತ್ತೆ ಪುನ ಆಡ್ದೆ. ಇನ್ನೂ ಎಲ್ಲಾರ್ ಬಂದರೆತಾ. ಆದ್ರೆ ಆಡಿ ಆಡಿ ಕೊನೆಗೆ ಉಳ್ದುದು ನಂಗೆ ಟೊಪ್ಪಿ ಮಾತ್ರ!

ಮತ್ತೆ ನಂಗಾತ್ ನಾ ಎಲ್ಲಾ ದುಡ್ಡುನಾ ಕಳ್ಕಂಡೆ. ಆದರೂ ಮನ್ಸು ಮಾತ್ರ ಅಲ್ಲಿಗೆ ಹೋದೆ. ಅದ್ಕೆ ನಾನೇ ತಿರ್ಮಾನ ಮಾಡ್ಕಂಡ್ ನನ್ನ ಆತ್ಮ ಇಸ್ವಾಸಂದ ಆ ಕಡೆ ಮನ್ಸೆ ಹಾಕುಲೆ.

ಇದು ಹಂಗೆ ಹಿಂಗೆ ಆಗಿ ಡ್ರಗ್ಸ್, ಎರ, ಅಫೀಮು, ಹೆರಾಯಿನ್, ಗಾಂಜ, ಚೆರಸ್‌ತ ಇನ್ನೂ ಏನೆಲ್ಲಾ ಉಟ್ಟಲ್ಲ. ಅವೆಲ್ಲ ನಮ್ಮನ್ನ ಗುಲಾಮರನ್ನಾಗಿ ಮಾಡಿ ಬುಟ್ಟದೆ. ಇವೆಲ್ಲಾ ನಮ್ಮ ಬಾಳ್‌ನೇ ಬೋಳ್ ಮಾಡುವಲ್ಲಿ ಸಂಸಯನೇ ಇಲ್ಲೆ. ಅದ್ ನಮ್ಮ ಯುವಜನಾಂಗ ಇದ್ಕೆಲ್ಲಾ ಗುಲಾಮರಾಗುತ್ತಾ ಒಳೋ ಇದ್ರೆಲ್ಲಾ ತಿಂದರೆ ಹಾಳ್‌ತಾ ಗೊತ್ತಿದ್ದರೂ ಕೂಡ ಅದರ್ನ ಕಲ್ತ್ ಅದರ ಗುಲಾಮರಾಗುತ್ತಾ ಒಳೊ. ಇದ್ರ್‌ಂದ ನಮ್ಮ ಯುವ ಶಕ್ತಿನೇ ಪೋಲಾಗುತ್ತಾ ಉಟ್ಟು. ನೀವೆಲ್ಲಾ ಎಚ್ಚರಾಕುತಾ ನಾನ್ ಹೇಳ್ಕಂಬದು. ನೀವೇನ್ ಹೇಳ್ರೆ?

ಬೈನೆರವನ ಪುರುಶೋತ್ತಮ, ಮದೆ ಗ್ರಾಮ

# ವ್ಯಕ್ತಿ ಪರಿಚಯ : ಮರೆಯಾದ ಬಿ. ಕೆ. ಬಿ.



ಶ್ರೀ ಬಿ. ಕೆ. ಬೆಳ್ಳಿಯಪ್ಪ

ವಿಶಿಷ್ಟ ತಳಿಯ ಭತ್ತವನ್ನು 60 ರ ದಶಕದಲ್ಲೇ ಕಂಡು ಹಿಡಿದ ಬಿ. ಕೆ. ಬೆಳ್ಳಿಯಪ್ಪ ಇನ್ನು ನೆನಪು ಮಾತ್ರ.

ಮೂರ್ನಾಡುವಿನ ಬಡುವಂಡ ಬೆಳ್ಳಿಯಪ್ಪ ಬದುಕಿದ್ದಾಗ ಸ್ವತಃ ಹೆಸರಾಗಿದ್ದಕ್ಕಿಂತ ಹೆಚ್ಚಾಗಿ ಅವರು ಸಂಶೋಧಿಸಿದ ಭತ್ತದ ತಳಿಯೇ ನಾಡಿನಲ್ಲಿ ಹೆಸರುವಾಸಿಯಾಗಿತ್ತು. ಬಿ. ಕೆ. ಬಿ. ಎಂಬ ಭತ್ತದ ತಳಿಗೆ ತಮ್ಮ ಹೆಸರೇ ಇದ್ದುದ್ದರಿಂದ ಬೆಳ್ಳಿಯಪ್ಪ ಖ್ಯಾತಿ ಕಡೆ ಗಮನ ನೀಡುವ ಪ್ರಸಂಗವೇ ಬರಲಿಲ್ಲ. ಸುಮಾರು 45 ವರುಷ ಕೃಷಿಕನಾಗಿ ಬದುಕಿದವರು ಬೆಳ್ಳಿಯಪ್ಪ. ಅವರು ಈ ಅಕ್ಟೋಬರ್ 10ರಂದು ತಮ್ಮ 83ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು. ಅವರು ತಮ್ಮ ಹಿಂದೆ ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಖ್ಯಾತವಾಗಿರುವ ಬಿ. ಕೆ. ಬಿ. ತಳಿ ಬಿಟ್ಟು ಹೋದರು.

ಅರವತ್ತರ ದಶಕದಲ್ಲಿ ಹಸುಗಳಿಗೆ ಮೇವಿನ ತೀವ್ರ ಬರ ಕಂಡಾಗ, ಹುಲುಸಾದ ಹುಲ್ಲಿಗಾಗಿ ಏನನ್ನಾದರೂ ಮಾಡಬೇಕೆಂಬ ಉಮೇದಿನಿಂದ ಕೊಡಗು ಜಿಲ್ಲೆಯ ಮೂರ್ನಾಡಿನ ಬೆಳ್ಳಿಯಪ್ಪ ಐ. ಆರ್. 8' ಮತ್ತು ಬಿಳಿ ಭತ್ತದ ತೆನೆಯನ್ನು ಕಸಿ ಮಾಡಿದರು. ಆಗಲೇ ಸೃಷ್ಟಿಗೊಂಡದ್ದು ಬಿ. ಕೆ. ಬಿ. ಎಂಬ ಹೊಸ ತಳಿ. ಆರಡಿ ಎತ್ತರಕ್ಕೆ ಬೆಳೆಯುತ್ತಿದ್ದ ಈ ತಳಿಯಲ್ಲಿ ಮೃದು ಮತ್ತು ಅತ್ಯಂತ ರುಚಿಯಾದ ಭತ್ತ ಬೆಳೆ ದೊರಕುತ್ತಿತ್ತು. ಎತ್ತರದ ಹುಲ್ಲೂ ಸಿಗುತ್ತಿತ್ತು. ಶೀತ ಪ್ರದೇಶದಲ್ಲಿ ಹೆಚ್ಚಿನ ಫಸಲು ದೊರಕುತ್ತಿದ್ದುದ್ದರಿಂದ ಕೊಡಗಿನಲ್ಲಿ ಬಲು ಬೇಗನೆ ಬಿ. ಕೆ. ಬಿ. ತಳಿ ಖ್ಯಾತವಾಯಿತು. ಹೀಗೆ 1962ರಲ್ಲಿ ಹೊಸ ತಳಿ ಬಿ. ಕೆ. ಬೆಳ್ಳಿಯಪ್ಪ ಅವರಿಂದ ಸೃಷ್ಟಿಗೊಂಡಿದ್ದರಿಂದ ಅದು ಬಿ. ಕೆ. ಬಿ. ಅಕ್ಕಿ ಎಂದು ಹೆಸರಾಯಿತು. ಅನಂತರ ತಮ್ಮ ಆರು ಎಕರೆ ಭೂಮಿಯಲ್ಲಿ ಬೆಳ್ಳಿಯಪ್ಪ ಇನ್ನೂ ಹೆಚ್ಚಿನ ಸಂಶೋಧನೆ ಮಾಡಿದರು. ಆರಂಭದಲ್ಲಿ ಕೊಡಗು, ದಕ್ಷಿಣ ಕನ್ನಡಕ್ಕೆ ಸೀಮಿತವಾಗಿದ್ದ ಬಿ. ಕೆ. ಬಿ. ಕ್ರಮೇಣ ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲೂ ಖ್ಯಾತವಾಯಿತು.

1967ರಲ್ಲಿ ವೀರೇಂದ್ರ ಪಾಟೀಲರ ಸರಕಾರ ಬೆಳ್ಳಿಯಪ್ಪನವರ ಸಂಶೋಧನೆಗೆ ಮೆಚ್ಚಿ 'ಕರ್ನಾಟಕ ವಿಕಾಸರತ್ನ' ಬಿರುದನ್ನು ನೀಡಿ ಗೌರವಿಸಿತು. ಜಪಾನ್, ಅಮೇರಿಕಾ, ಇಟಲಿ, ಥೈಲ್ಯಾಂಡ್, ಜರ್ಮನಿ ಮುಂತಾದ ದೇಶಗಳ ಕೃಷಿ ವಿಜ್ಞಾನಿಗಳು ಮೂರ್ನಾಡಿಗೆ ಬಂದು ಹೊಸ ತಳಿ ಬಗ್ಗೆ ಬೆಳ್ಳಿಯಪ್ಪನವರಿಂದ ಮಾಹಿತಿ ಸಂಗ್ರಹಿಸಿ ತಂತಮ್ಮ ದೇಶಗಳಲ್ಲಿ ಪ್ರಯೋಗ ಮಾಡಿದ್ದೂ ಇದೆ. ಶೈಕ್ಷಣಿಕ ಪದವಿಯಾಗಲಿ, ಕೃಷಿ ಪದವಿಯನ್ನಾಗಲೀ ಹೊಂದಿರದ ಬೆಳ್ಳಿಯಪ್ಪ ಸಾಧಾರಣ ರೈತರಾಗಿಯೇ ಬೆಳೆದರವರು. ಸಂಗೀತದಿಂದ ಸಸ್ಯಗಳಿಗೆ ಒಳಿತಾಗುತ್ತದೆ ಎಂಬ ಮಾಹಿತಿ ಸಿಕ್ಕೊಡನೆಯೇ ತಮ್ಮ ಗದ್ದೆಯುದ್ದಕ್ಕೂ ಸಂಗೀತ ವಾದ್ಯ ಏರ್ಪಾಡು ಮಾಡಿ, ಬೆಳಿಗ್ಗೆ ಸಂಜೆ ವಾದ್ಯ ನಿನಾದ ಪೈರಿಗೆ ಕೇಳುವಂತೆ ಮಾಡಿದರು. ಅಧಿಕ ಉತ್ಪತ್ತಿ ತೆಗೆದು ತೋರಿಸಿದ ಬೆಳ್ಳಿಯಪ್ಪ ಪ್ರತಿಯೊಂದನ್ನೂ ಪ್ರಾಯೋಗಿಕವಾಗಿ ಕೈಗೊಳ್ಳುತ್ತಿದ್ದರು.

ಬಿ. ಕೆ. ಬಿ. ತಳಿಯ ಅಕ್ಕಿಯು ಗ್ಯಾಸ್ಟ್ರಿಕ್ ಕಾಯಿಲೆಗೆ ರಾಮಬಾಣ ಎಂದು ಜಪಾನಿನ ವಿಜ್ಞಾನಿಗಳ ದೃಢೀಕರಿಸಿದ್ದೂ ಇದೆ. ಕೃಷಿ ಜತೆಗೆಯೇ ರೈಫಲ್ ಶೂಟಿಂಗ್‌ನ ಹವ್ಯಾಸ ಹೊಂದಿದ್ದ ಬೆಳ್ಳಿಯಪ್ಪ ಒಳ್ಳೆ ಗುರಿಕಾರರೂ ಹೌದು. ಬಿ. ಕೆ. ಬಿ. ತಳಿಯ ಇನ್ನಷ್ಟು ಅಭಿವೃದ್ಧಿಗೆ ಸರಕಾರದಿಂದ ನಿರೀಕ್ಷಿತ ಸಹಕಾರ ದೊರಕಲಿಲ್ಲ ಎಂಬ ಕೊರಗು ಇದ್ದರೂ ಇತರರಲ್ಲಿ ಅದನ್ನು ತೋರ್ಪಡಿಸಿದವರಲ್ಲ.

ಕೊಡಗಿನಲ್ಲಿ ಕ್ರಮೇಣ ಗದ್ದೆಗಳು ಕಣ್ಮರೆಯಾಗುತ್ತಾ. ಶುಂಠಿಯ ವ್ಯಾಪಕತೆ ಹೆಚ್ಚಾಗುತ್ತಿದೆ ಎಂಬ ಕೊರಗೂ ಬೆಳ್ಳಿಯಪ್ಪನವರಿಗಿತ್ತು.

ಲೇಖಕ : ಅನಿಲ್ ಎಚ್. ಟಿ., ಮಡಿಕೇರಿ

---

## ಅಮ್ಮ

ಅ - ಮ್ಮ ಎನ್ನುವ ನುಡಿಯಲ್ಲಿ
ಆ - ನಂದ ಅಡಗಿಹುದಿಲ್ಲಿ
ಇ - ರುವೆವು ಎಂದುತಾಯಿ ಜತೆಯಲ್ಲಿ
ಈ - ನುಡಿ ಸತ್ಯ ಜಗದಲ್ಲಿ
ಉ - ಸಿರನ್ನು ನೀಡಿ ಜೀವವ ಕೊಟ್ಟ
ಊ - ಟವ ನೀಡಿ ಬೆಳೆಸಿದ ನಿಮ್ಮ
ಋ - ಣವನ್ನು ಹೇಗೆ ತೀರಿಸಲಮ್ಮ
ೠ - ಣವನ್ನು ಹೇಗೆ ತೀರಿಸಲಮ್ಮ
ಎ - ಂದು ನಮ್ಮ ನೆರಳು ನೀವಮ್ಮ
ಏ - ತಕ್ಕೆ ಜಾತಿಯ ಜಗಳವು ನಮ್ಮಲ್ಲಿ ಅಮ್ಮ
ಐ - ಕ್ಯತೆಗಾಗಿ ಶ್ರಮಿಸುವೆವಮ್ಮಾ
ಒ - ಂದೇ ಎಲ್ಲರು ನಾಡಿನ ಜನರು
ಓ - ದಲು ಬರೆಯಲು ಕಲಿಯುವ ಎಲ್ಲರು
ಔ - ದಾರ್ಯದಿ ಗುರು ಹಿರಿಯರಿಗೆ ತಲೆ ಬಾಗುವೆವಮ್ಮ
ಅಂ - ದು ನೀನು ನೀಡಿ ಜನ್ಮ
ಅಃ - ತಾಯಿಯೇ ವಿಶ್ವದ ದೇವತೆಯಮ್ಮ

ಪಡಿಕಲ್ ಸುನಿತಾ ಚಿಣ್ಣಪ್ಪ, ಕೈಕೇರಿ ಗ್ರಾಮ

# ಒಂದ್ ಕಣ್ಣ್‌ಗೆ ಸುಣ್ಣ, ಒಂದ್ ಕಣ್ಣ್‌ಗೆ ಬೆಣ್ಣೆ

ನಮ್ಮನೆ ಹತ್ರ ಜಾನಕಿ ಅಕ್ಕನವರ ಮನೆ.ಆ ಜಾನಕಿ ಅಕ್ಕಂಗೆ ಇಬ್ಬರು ಹೆಣ್ಣ್ ಮಕ್ಕ. ನೋಡಿಕೆ ತುಂಬಾ ಪೊರ್‌ಲು ಇದ್ದೊ. ದೊಡ್ಡವಳ ಹೆಸ್ರ್ ಗನು ತೇಳಿ, ಸಣ್ಣವಳ ಹೆಸ್ರ್ ವಿನು ತೇಳಿ. ಗನು ಸ್ವಲ್ಪ ಪಾಪದ ಗೂಡೆ. ಎಂಥದ್ ಹೇಳಿರೂ, ಮುಚ್ಚಿಕಂಬದು. ಆದರೆ ವಿನು ಹಂಗೆ ಅಲ್ಲ. ಅವ್ಳು ಭಾರಿ ಒಂದ್ "ಗಂಡ್ ಬೀರಿ"ನಂಗೆ ಇದ್ದವುಳು. ಅಕ್ಕನನ್ನ ಹೊಡ್ದ್, ಮರ್‌ಡ್‌ಸಿ, ಪುನಃ ಅವ್ವಂಗೆ ಹೋಗಿ ಚಾಡಿ ಹೇಳಿ, ಅಕ್ಕಂಗೆ ಬೈಸ್‌ತಾ ಇತ್. ಅವ್ವಂಗೆ ಸನ ಸಣ್ಣವುಳ್‌ನ ಕಂಡರೆ ಬಾಳ ಖುಷಿ. ಹೆಂಗಿದ್ದರೂ ಸಣ್ಣಮಗ ಅಲ್ಲ, ಕೊಂಡಾಟ ಸ್ವಲ್ಪ ಜಾಸ್ತಿ. ಗನುನ ಕಂಡ್ರೆ ಆದೇಲೆ. ಅವ್ವಂಗೆ ಅವುಳು ಕುದ್ದ್‌ದ್ ನಿತ್ತದ್ ಕಾಂಬಕಾದುಲೆ. ಅವ್ಳು ಎಂಥದ್ ಮಾಡ್ರೂ ತಪ್ಪೆ, ಹೀಂಗೆ ಇರ್‌ಕನ ಅಕ್ಕ ತಂಗಿ ಇಬ್ಬರೂ ಕಾಲೇಜ್ ಎಲ್ಲಾ ಒಂದಿದೊ ಅಕ್ಕಂಗೆ ಒಂದ್ ಪ್ರೈವೇಟ್ ಕೆಲ್ಸ ಸಿಕ್ಕಿತ್. ತಂಗೆಗೆ ಕಂಪ್ಯೂಟರ್ ಮಾಡ್ಸೊನೋ ತೇಳಿ ಕಂಪ್ಯೂಟರ್ ಕ್ಲಾಸಿಗೆ ಕಳ್‌ಸಿದೊ. ಈ ತಂಗೆ ಕಂಪ್ಯೂಟರ್‌ಗೆ ಹೋಗಿ, ಹೋಗಿ ಅಲ್ಲಿನ ಮಾಸ್ಟ್ರನೇ ಲವ್ ಮಾಡಿಕೆ ಸುರು ಮಾಡ್ತ್. ಅವನೊಟ್ಟಿಗೆ ಸಿನೆಮಾಕ್ಕೆ ಹೋಕೆ, ಸುತ್ತಿಕೆ ಸುರಾತ್. ಈ ವಿಷಯನ ಅಕ್ಕಂಗೆ ಯಾರೋ ತಿಳ್ಸಿದೋ. ತಂಗೆನ ಸ್ವಲ್ಪ ಹದ್ದ್‌ಬಸ್ತ್‌ಲಿ ಇಸಿಕಣೇತಾ. ಅಕ್ಕ ನೋಡಿ ನೋಡಿ ಕಡೆಗೆ ಮನೆಲಿ ಬಂದ್ ಅವ್ವನೊಟ್ಟಿಗೆ ಹೇಳ್ತ್. ವಿಷಯ ಹೀಂಗೆ ಉಟ್ಟುತಾ. ಮೊದ್‌ಲೇ ಅಕ್ಕನ ಕಂಡ್ರೆ ಆಗದ ಅವ್ವ "ನಿಂಗೇನ್‌ನೇ ಅವ್ಳು ಏನಾರ್ ಮಾಡ್ರೆ. ಅವುಳು ಇನ್ನೂ ಸಣ್ಣ ಗೂಡೆ. ನಿಂಗೆ ಅವ್ಳನ ಕಂಡ್ರೆ ಕಣ್ಣ್ ಉರ್‌ದದೆ. ಅವಳು ಕುದ್ದದ್ ನಿತ್ತದ್ ನಿಂಗೆ ಕಾಂಬಕಾದುಲೆ. ಅದ್‌ಕ್ಕೆ ನೀನ್ ಅವಳ ಮೇಲೆ ಸುಮ್ಮನೆ ಹೇಳ್ದು. ಅದೇನ್ ಜನ ನಿನ್ನೊಟ್ಟಿಗೆ ಮಾತ್ರ ಹೇಳ್ದು. ನಮ್ಮೊಟ್ಟಿಗೆ ಯಾಕೆ ಹೇಳ್ದುಲೆ" ತೇಳಿ ಸಮಾ ಬೈದೊ. ನೀವು ಹೇಂಗಾರ್ ಸತ್ತ್‌ಕಣಿ ನಿಮಿಗೆ ಒಳ್ಳೆದ್ ಹೇಳ್ರೆ ಆಕಿಲೆಂತೇಳಿ ಅಕ್ಕ ಸುಮ್ಮನಾತ್. ಇತ್ತ ತಂಗೆದ್ ಸುತ್ತುದು ಜಾಸ್ತಿ ಆತ್. ಕ್ಲಾಸಿಗೇಂತ ಹೋದು ಅವನೊಟ್ಟಿಗೆ ಸುತ್ತುದು. ಇದ್ದ ಪಾರ್ಕ್, ಹೋಟೆಲೇ ತಂಗೆಗೆ ಕ್ಲಾಸ್ ದಿನಕ್ಕೊಂದೊಂದೇ ಬಟ್ಟೆ, ಬರೆ ಅವಳ ಸಾಮಾನ್‌ನೆಲ್ಲ ಯಾರಿಗೂ ಗೊತ್ತಾಗದಂತೆ ಒಂದೊಂದೇ ಸಾಗಿಸಿತ್. ಒಂದಿನ ಬೆಳಿಗ್ಗೆ ಸ್ವಲ್ಪ ಬೇಗ ಹೊರ್‌ಟತ್. ಮನೆಲಿ ಕಾರಣ ಕೇಳ್‌ಕಾಕನ, ನಂಗೆ ಇಂದ್ ಟೆಸ್ಟ್ ಉಟ್ಟು. ಅದ್‌ಕ್ಕೆ ನಾನ್ ಬೇಗ ಹೋಕು ತೇಳಿ ಹೇಳ್ತ್. ಅಕ್ಕನೊಟ್ಟಿಗೇ ಹೋತು. ಅಂದ್ ಒಂಬೊತ್ತಾದರೂ ಗೂಡೆ ಮನೆಗೆ ಬಾತ್‌ಲೆ. ಅವ್ವ ಮೆಟ್ಲ್‌ಲೇ ದಾರಿನೋಡಿಕಂಡ್ ಕುದ್ದತ್. ಸಾಯಂಕಾಲ ಅಕ್ಕ ಬಾಕಾಕನ ತಂಗೆನ ಕ್ಲಾಸ್ ಮಕ್ಕ ಸಿಕ್ಕಿ "ವಿನು ಯಾಕೆ ಕ್ಲಾಸಿಗೆ ಬಾತ್‌ಲೇ" ತಾ ಕೇಳ್ದೊ. ಆಗ ಅಕ್ಕ "ಅವ್ಳು ಬೆಳಿಗ್ಗೆ ನನ್ನೊಟ್ಟಿಗೆ ಬಂದುಟಲ್ಲಾ. ಟೆಸ್ಟ್ ಉಟ್ಟುತಾ ಮನೆಲಿ ಹೇಳ್ತ್" ತ ಹೇಳ್‌ಕಾಕನ ಅವುಳ ಕ್ಲಾಸ್ ಮಕ್ಕ ಯಾವ ಟೆಸ್ಟ್ ಇತ್ತ್‌ಲೆ ಇಂದ್ ತೇಳ್‌ದೊ.

ಸರಿ ಅಕ್ಕ ಇವ್ಳು ಯಾಕೆ ಕ್ಲಾಸಿಗೆ ಹೋತ್‌ಲೆ. ಮನೆಗೆ ಹೋಗಿರ್‌ದುತ ಗ್ಯಾನ ಮಾಡಿಕಂಡ್ ಮನೆಗೆ ಬಾತ್. ಮನೆಗೆ ಬಂದ್ ಮೆಟ್ಲ್ ಹತ್ತಿಕಾಕನ ಅವ್ವ ಕೇಳ್ತ್. ಅವ್ಳು ಎಲ್ಲೀಂತ. ಮೊದ್‌ಲೇ ತಂಗೆ ಕ್ಲಾಸಿಗೆ ಹೋತ್‌ಲೆತ ಗೊತ್ತಿದ್ದ ಅಕ್ಕ ನಂಗೇನ್ ಗೊತ್ತುಟು, ಅವ್ಳು ಎಲ್ಲಿಗೆ ಹೋಗುಟುತ. ನಾನ್ ಅಂದ್ ಹೇಳ್‌ಕಾಕನ ನಿಮಿಗೆಲ್ಲಾ ಸುಳ್ಳು ಆಗಿತ್‌ತ್ತೇಳಿ ಅವುಳ ಕ್ಲಾಸ್ ಮಕ್ಕ ಹೇಳ್‌ದರ್‌ನ ಹೇಳ್ತ್. ಕತ್ತಲೆವರೆಗೂ ಗೂಡೆನ ದಾರಿ ನೋಡ್ದೊ. ಕತ್ತಲೆ ಆದರೂ ಗೂಡೆನ ಪತ್ತೆ ಇಲ್ಲೆ. ಎಲ್ಲಾರ್ ಹುಡ್ಕೊನೋ ತೇಳ್‌ರೆ ಕತ್ತಲೆ ಬೇರೆ ಆಗುಟು. ಅಂತೂ ಹುಡ್ಕಿದೊ. ಎಲ್ಲಿ ಹುಡ್ಕಿರೂ ಗೂಡೆ ಇಲ್ಲೆ. ಅವ್ವ ಅಪ್ಪಂಗೆ ಥರಥರತ ನಡ್‌ಗಿಕೆ ಸುರಾತ್. ದಿನ ಮೂರಾದರೂ ಗೂಡೆ ಪತ್ತೆ ಇಲ್ಲೆ. ನೆರೆಮನೆಯವುಕೆಲ್ಲಾ ಗೊತ್ತಾತ್. ಅಪ್ಪ ಮಗಳಿಗೆ ಶಾಪ ಹಾಕಿಕೆ ಸುರು ಮಾಡ್ತ್. ಅವ್ಳು ಬರ್‍ಲಿ. ಎಲ್ಲಿ ಸಾಯಕೆ ಹೋದ್. ಬಂದರೆ ಮನೆ ಹತ್ತಿಸಿಕಿಲೆ, ಗುಂಡ್ ಹೊಡ್ದ್ ಬುಟ್ಟನೆ. ಇಂಥ ಮಕ್ಕ ಇಲ್ಲದಿದ್ದರೂ ಆದುತ ಬೈಯ್ಯಕೆ ಸುರು ಮಾಡ್ದೊ. ಮೂರ್‌ದಿನ ಕಳಿಯಕಾಕನ ಗೂಡೆ ಮೆಲ್ಲೆ ಒಂದು ಹೈದನ ಕರ್ಕಂಡ್ ಬಂದದೆ. ನೋಡ್ರೆ ಕುತ್ತಿಗೆಲಿ ಕರಿಮಣಿ ತಾಳಿ ಎಲ್ಲಾ ಹೊಸದಾಗಿ ಹಾಕಿಕಂಡೇ ಬಂದುಟು. ಇತ್ತ ಗುಂಡು ಹೊಡ್ದನೆತೆಲ್ಲಾ ಹೇಳ್ದವು ಎಲಿನಂಗೆ ಸುಮ್ಮನಾದೊ. ಇನ್ನ್ ಎಂಥರ ಮಾಡ್ದುತೇಳಿ ಲಾಯಿಕಲಿ ಪೆಟ್ಟಿಗೆ ತುಂಬಾ ಬಟ್ಟೆ, ಬರೆ, ಚಿನ್ನ ಎಲ್ಲಾ ತೆಗ್ದ್. ಊರಿಗೆಲ್ಲಾ ಹೇಳಿ ಮೊದುವೆ ಮಾಡ್ದಂಗೆ ಶಾಸ್ತ್ರ ಮಾಡ್ದೊ. ಇನ್ನೆಂಥ ದಾರಿ ಉಟ್ಟು ಅವುಕೆ ಪಾಪ.

ಅಂದ್‌ದ ಅಕ್ಕ ಎಲ್ಲಿ ಹೋದರೂ ಅವುಳಿಗೆ ತಲೆ ಎತ್ತಿಕೆ ಆಗದುಂಗೆ ಆತ್. ಅವುಳ್‌ನ ಕಾಂಬಕಾಕನ ಎಲ್ಲವ್ರೂ, ಇವ್ಳು ಓಡಿಹೋದವಳ ಅಕ್ಕಂತ ಹೇಳ್ರೆ. ಇನ್ನ್ ಕೆಲವು ಜನ ಇವ್ಳೆ ಓಡಿಹೋದ ಗೂಡೆ. ಈಗ ನೋಡು ಹೇಂಗೆ ಹೋದೆತ ಹೇಳಿಕೆ ಸುರುಮಾಡ್ದೊ. ಪಾಪ ಯಾವ ತಪ್ಪೂ ಮಾಡದ ಇವುಳಿಗೆ ಕೇಳಿ ಕೇಳಿ ಸಾಕಾತ್. ತಪ್ಪು ಮಾಡ್ದ ತಂಗೆ, ನಾಲ್ಕ್ ಜನರ ಬಾಯಿಗೆ ಬಿದ್ದದ್ ಅಕ್ಕ. ಇದ್‌ನ ಅವ್ಳು ಬಂದ್ ಮನೆಲಿ ಹೇಳ್‌ಕಾಕನ ಅವ್ವಂದ್ ಬೈಗಳ ಬೇರೆ. "ನಿಂಗೆ ಅವುಳು ಒಳ್ಳೆದಾದು ಕಾಂಬಕಾದುಲೆ. ಅದ್‌ಕ್ಕೆ ನೀನ್ ಹೇಂಗೆ ಹೇಳ್ಧುತ" ಅದರ್‌ದ ಅವುಳು ಯಾರೊಟ್ಟಿಗೆನೂ ಹೇಳದೆ ಸುಮ್ಮನೆ ಕೊರ್‌ಗಿಕಂಡ್ ಇತ್ತ್. ಅದೂ ಸಾಲ್ದ್‌ತ ಅಕ್ಕಂಗೆ ಸಂಬಂಧ ಬರೋವು ಸನ ಯಾರಿಂದನೋ ವಿಷಯ ತಿಳ್ದ್. ಆ ಓಡಿಹೋದ ಗೂಡೆನ ಅಕ್ಕ ಆದರೆ ಬ್ಯಾಡತ ವಾಪಾಸ್ ಹೋಗ್‌ತಿದ್ದೊ. ಅವ್ವಂಗತೂ ಮಗಳ ಗೊಡವೇ ಇಲ್ಲೆ. ಏನಿದ್ದರೂ ಸಣ್ಣಮಗಳ ಮೇಲೆ ಹೆಮ್ಮೆ. ಅವುಳು ಬಾಕಕನ ಏನಾರ್ ಸ್ಪೆಷಲ್ ಮಾಡಿ ತಿನ್ಸದು. ಎಲ್ಲಾ ಹೊತ್ತ್‌ಕಂಡ್ ಹೋಗಿ ಅವುಳಿಗೆ ಕೊಡ್ದೆ ಆತ್.

ಇತ್ತ ಅಕ್ಕನ ಅದೃಷ್ಟ ಸ್ವಲ್ಪ ಲಾಯಿಕಿತ್ತ್ ಕಂಡದೆ. ಒಬ್ಬ ಹೈದ ಮನೆಗೆ ಬಾತ್. ಮನೆಲಿ ಅವ್ವ ಅಪ್ಪನೊಟ್ಟಿಗೆ ಕೇಳಿ, ಗೂಡೆನ ಮೊದುವೆ ಆನೆತ ಮಾತ್ ಕೊಟ್ಟತ್. ಅವ್ವ ಅಪ್ಪ ಪುನಃ ಈಗಲೇ ನಮಿಗೆ ಮೊದುವೆ ಮಾಡಿಕೆ ಆದುಲೆತ ಹೇಳ್ದೊ. ಈ ಜನಗ ಅವನ ಕಿವಿನೂ ಚುರಿಯಕೆ ಸುರು ಮಾಡ್ದೊ. ಆದರೆ ಅದ್ಯಾವುದಕ್ಕೂ ಹೈದ ಬೊಗ್ಗದೆ. ಮಾಮೂಲಿಯಾಗಿ ಗೂಡೆ ಮನೆಗೆ ಬಂದ್‌ಕಂಡ್ ಹೋಕಂಡ್ ಇತ್ತ್. ಈ ಹೈದ ಬಾದು ಗೂಡೆನ ಅವ್ವಂಗೆ ಆತ್‌ಲೆ. ಮೊದ್‌ಲೇ ಮಗಳ ನೆರ್‌ಳ್ ಕಂಡ್ರೆ ಆಗದ ಅವ್ವ ಮಗಳಿಗೆ ಬೈಯಕೆ ಸುರು ಮಾಡ್ತ್. ಅವ ಒಬ್ಬ ಬಾದರ್‌ದಾಗಿ ನಮಿಗೆ ಊರ್‌ಲಿ ತಲೆ ಎತ್ತಿಕಾದುಲೆ. ನಮ್ಮ ಮರ್‍ಯಾದೆ ಪೂರ ನಿನ್ನಿಂದಾಗಿ ಮೂರ್ ಕಾಸಿಗೆ ಹರಾಜಾಗಿ ಹೋತುಂತೆಲ್ಲಾ ಬೈಯಿಕೆ ಸುರು ಮಾಡ್ದೊ. ಸಣ್ಣಮಗ್‌ಳು ವಿನು ಓಡಿಹೋಕನ ಮನೆಯವರ ಮರ್‍ಯಾದೆ ಹರಾಜಾಗಿತ್ತ್‌ಲೆ.

20ನೇ ಪುಟಕ್ಕೆ

8ನೇ ಪುಟದಿಂದ

ರೇವತಿ ಕಣ್ಣರಳಿಸಿ ನೊಡಿದಳು.

"ನಿನ್ನ ಸಾವನ್ನು ನಾನು ಬಯಸಿದ್ದೇನೆ. ಮೊನ್ನೆಯ ದಿನ ಹಾವು ಕಚ್ಚಲು ಬಂದಿದ್ದಾಗ ನಿನ್ನನ್ನು ಕಾಪಾಡುತ್ತಿದ್ದೆನೆ? ನನ್ನ ಬಗ್ಗೆ ನಿನಗೆ ಸಂಶಯ ಬಂದಿರುವುದರಿಂದ ನಾನು ಏನೇ ಒಳ್ಳೆಯದು ಮಾಡಿದರೂ ಸಹ. ನಿನಗೆ ಅದು ಬೇರೊಂದು ರೀತಿಯಲ್ಲಿ ಕಾಣುತ್ತದೆ.

ರೇವತಿ ಉತ್ತರಿಸದಾದಳು !

ಪ್ರಸನ್ನನ ಮಾತುಗಳು ನಿಜ ಅನಿಸುತ್ತದೆ. ಈಗ ಅವಳಲ್ಲಿ ಒಂದು ರೀತಿಯ ಗೊಂದಲ ಉಂಟಾಗಿದೆ.

ಪ್ರಸನ್ನ ಗಂಭೀರವಾಗಿ "ರೇವತಿ ... ನನ್ನನ್ನು ಅಪರಾಧಿ ಅಂತ ತೀರ್ಮಾನಿಸಲು ಹುಚ್ಚು ಸಾಹಸ ಮಾಡಬೇಡ, ಈ ರೀತಿ ನೀನು ಒಂಟಿಯಾಗಿ ಕಾಡಿನಲ್ಲಿ ತಿರುಗುತ್ತಿದ್ದರೆ ಸರ್ಪಗಳಿಗಿಂತಲೂ ವಿಷಪೂರಿತವಾಗಿರುವ ಮನುಷ್ಯನೆ ನಿನ್ನನ್ನು ಕೊಲ್ಲುತ್ತಾನೆ !" ಎಂದು ಅಲ್ಲಿ ನಿಲ್ಲದೆ ಸರಸರನೆ ಹೊರಟನು.

ರೇವತಿ ದಂಗು ಬಡಿದವರಂತೆ ನಿಂತಿದ್ದಾಳೆ. ನನ್ನನ್ನು ಸಾಯಿಸಲು ಪ್ರಯತ್ನಿಸಿದ್ದು ಯಾರು?

ಇವರಿಬ್ಬರಿಗೂ ಕಾಣದಂತೆ ಮರವೊಂದರ ಮರೆಯಲ್ಲಿ ...ಕ್ತಿಯೊಂದು ನಿಂತು ಕೊಂಡಿತ್ತು.

ಆ ವ್ಯಕ್ತಿ ಅರುಂಧತಿ !

(ಮುಂದುವರೆಯುತ್ತದೆ)

---

...ನೇ ಪುಟದಿಂದ

...ಳಗೆ ಮೊಟಕುಗೊಳಿಸಿದ್ದಲ್ಲಿ ಇನ್ನು ಹೆಚ್ಚಿನ ಕಳೆ ಏರುತ್ತಿತ್ತು ಎನ್ನುವ ವಾದವು ಹಲವರದು. ವಯೋವೃದ್ಧದ್ವಯರನ್ನು ಬೆಳಿಗ್ಗೆಯೇ ಆಮಂತ್ರಿಸಿ ರಾತ್ರಿ 8ರ ತನಕ ಕೂಡಿಟ್ಟು ಸಂಕಟ ಯಾರೊಡನೆ ಹೇಳಲಿ ಎನ್ನುವ ವ್ಯಥೆಯು ಒಂದು ಕಡೆ. ಆಡಂಬರದ ಸ್ವಂತ ವಾಹನಗಳಿಲ್ಲದೆ ಕಾಲಲ್ಲೇ ನಡೆದುಕೊಂಡು ಬಂದ ಮುಖ್ಯ ವಯೋವೃದ್ಧ ಅತಿಥಿಗಳನ್ನು ಖಾಸಗಿ ಬಸ್ ನಿಲ್ದಾಣದ ತನಕವು ಬಿಟ್ಟು ಬರುವ ಸೌಜನ್ಯತೆಯನ್ನು ಯಾರು ತೋರಿಸಬೇಕೆನ್ನುವ ಅನುಕಂಪ ಇನ್ನೂ ಬರದು. ಮುಖ್ಯ ಅತಿಥಿಗಳ ಭಾಷಣದ ಸಮಯದಲ್ಲಿ ಸಿಳ್ಳೆ ಮೂಲಕ ಪರಿಹಾಸ್ಯ ಮಾಡುತ್ತಿದ್ದ ಕೆಲವರಿಗೆ ಸಂಗಾತಿ ಸಮಾಧಾನ ಹೇಳಬೇಕಾಯಿತು. ಜನರ ಸಹನೆಯ ಕಟ್ಟೆ ಒಡೆಯಲು ಕಾರಣ ರಾತ್ರಿ ತಡವಾಯಿತೆಂದು ಅಂತೆ. ಶಕ್ತಿ ಪತ್ರಿಕೆಯ ವರದಿಗಾರ ಹರ್ಷವರ್ಧನನ ತಾಳ್ಮೆಯನ್ನು ಮೆಚ್ಚತಕ್ಕದ್ದೆ. ಉಳಿದಂತೆ ಕಾರ್ಯಕ್ರಮಗಳು ಚೆನ್ನಾಗಿ ಮೂಡಿ ಬಂದವು.

ಇನ್ನು ಮುಂದಾದರು ಸಂಘಟಿಕರು ಎಚ್ಚೆತ್ತು ಯಾವುದೇ ಕಾರ್ಯಕ್ರಮ ಮಾಡಿದರೂ ಸಂಜೆ 5 ಗಂಟೆಯೊಳಗೆ ಮುಗಿಯಲೆಂದು ಮನಸ್ಸಾರೆ ಹಾರೈಸಿ, ಇನ್ನು ಮುಂದಕ್ಕೂ ಸಹ ಸಂಘಟನಾ ಕ್ರೀಡಾ ಕೂಟಗಳು ಆಗಾಗ ಜರುಗಿ ಬರಲೆಂದು ಅತಿಥಿಗಳ ಆಶಯದಂತೆ ಸಂಗಾತಿಯು ಸಹ ಬಯಸುತ್ತದೆ.

ಜೈ ಕುಲಭಾಂದವರೇ ;

ಸಂಗಾತಿ ವರದಿ : ಪಟ್ಟಡ ಪ್ರಭಾಕರ

5ನೇ ಪುಟದಿಂದ

ಮುಗಿಯಕೆ ಮುಂದೇ ವಾಲಿಕಂಡ್ ಹಿಂದಕೆ ಬೀಳುವಂಗಾತ್. ಅಷ್ಟೊತ್ತಿಗೆ ಮೋಟು ಅವನ ಹಿಡ್ಕಂಡ್ ಎಲ್ಲವು ಮೊಕ ಬಾಡ್ಸಿಕಂಡ್ ತನ್ನ ಸುತ್ತ ನಿತ್ತಿರ್ದುದ ಕಂಡ್ ಆಶ್ಚರ್ಯ ಆತ್.

"ಎಂತಕೆ ಎಲ್ಲವೂ ಒಂತರಾ ನೋಡ್ತಾವಳರಿ? ಮರ್ಸ್ಟ್ ಮರ್ಸ್ಟ್ ನಿನ್ನ ಕಣ್ಣೆಲ್ಲ ಊದಿಕಂಡುಟ್ಟಲ್ಲವ್ವಾ ಎಂತಾತ್?" ಗಾಬರಿಲೇ ಕೇಳ್ತ್.

"ನೀನ್ ಅಂಗಳಲಿ ಜಾರಿ ಬಿದ್ದ್ ಬುಟ್ಟವ್ವಾ ನಾವೆಲ್ಲ ಕೂಡಿ ಎತ್ತಿಕಬಂದ್ ನಿನ್ನ ಇಲ್ಲಿ ಮಲ್ಗ್‌ಸಿದೊ. ಪಾಪ, ನಿಂಗೆ ಮೈಕೈಯೆಲ್ಲ ಬೇನೆ ಇರ್ದು, ಈಗ ಹೋಗಿ ಮೀಕಂಡ್ ಬಾ, ಊಟ ಮಾಡಿ ಮತ್ತೆ ಎಲ್ಲ ನಿಧಾನಾಗಿ ಮಾತಾಡ್ನೊ" ಒಂದು ಕೈಲಿ ಮಂಜನ ತಬ್ಬಿಕಂಡ್ ಇನ್ನೊಂದು ಕೈಲಿ ಕಣ್ಣೀರ್ ವರ್ಸಿಕಂಡೇ ಶಾಂತಿ ಹೇಳ್ತ್. "ನಿಮಿಗೆಲ್ಲ ಎಂತ ಆವುಟು? ನೀ ಯಾಕೆ ಹಿಂಗೆ ಮಾತಾಡಿಯಾ? ನಾನ್ ಇಲ್ಲಿಗೆ ಹೆಂಗೆ ಬಂದೆ?" ಆಶ್ಚರ್ಯ ಪಟ್ಟ್‌ಕಂಡೇ ಬಾಬು ಕುದ್ದಲ್ಲಿಂದ ಮೇಲೆ ಎದ್ದತ್.

ಬಟ್ಟೆ, ಟವುಲು ಎಲ್ಲ ಹೆಗ್‌ಲ್ ಮೇಲೆ ಹಾಕಂಡ್, ಒಂದು ಕೈಲಿ ದೀಪನೂ, ಇನ್ನೊಂದು ಕೈಲಿ ಬಾಬುನ ರಟ್ಟೆನೂ ಹಿಡ್ಕಂಡ್ ಅವನ ಮೆಲ್ಲೆ ನಡ್ಸಿಕಂಡ್ ಮೋಟು ಗುಡ್ಡಕೆ ಹೋತು. ಹೋಗಿ ಗುಡ್ಡದೊಳಗೆ ಹುಕ್ಕಿದಂಗೇ :

"ನೀನ್ ಬುಡು ಮಾರಾಯ, ನಂಗೊಂದೂ ಕೇಡಿಲ್ಲೆ" ಹೇಳಿ ಬಾಬೂ, ರಟ್ಟೆ ಹಿಡ್ಕಂಡಿದ್ದ ಮೋಟುನ ಕೈನ ದೂಡ್ತ್.

ಮತ್ತೆ ಇಷ್ಟೊತ್ತುಗಂಟ ನಿಂಗೆ ನಿಮ್ಮ ಅಪ್ಪನ ಕೊಲೆ ಸೋಂಕ್ಯಂಡಿದ್ದದ್?"- ಮೋಟು ಆಶ್ಚರ್ಯಲಿಕೇಳ್ತ್.

"ಕೊಲೆನೂ ಇಲ್ಲೆ, ದೆವ್ವನೂ ಇಲ್ಲೆ. ಅವ್ವನ ಕೈಂದ ಬಚಾವಾಕೆ ನಾನ್ ನಾಟಕ ಮಾಡ್ದ ಅಷ್ಟೇ. ಅವ್ವಂಗೆಲ್ಲಾದರ್ ನಿಜ ಸಂಗತಿನ ಹೇಳಿಬುಡ್ಬಡಾ - ಹುಶಾರ್ !" ಹೇಳಿ ಬಾಬೂ ತುಟಿ ಮೇಲೆ ಬೆಟ್ಟ್ ಮೊಡ್‌ಕ್ಯಂಡ್ತ್.

ಇವನ ಅವತಾರ ಕಂಡ ಮೋಟುಗೆ, ಗುಡ್ಡದ ಮಾಡ್‌ಯೆಲ್ಲ ಕಳ್ಚಿಕಂಡ್ ಒಮ್ಮೆಗೆ ತಲೆಮೇಲೆ ಬಿದ್ದೋದಂಗಾಗಿ ಸೊಲ್ಪ ಹೊತ್ತು ಸೊಯೇ ಇಲ್ಲೆ. ಕಣ್ಣ್ ಬಾಯಿ ಬುಟ್ಟ್‌ಕಂಡ್ ಬೆಪ್ಪನಂಗೆ ನಿತ್ತಲ್ಲೇ ನಿತ್ತ್‌ಬುಡ್ತ್.

ಚಾಂಗನ ಪಿ. ಪೂವಯ್ಯ, ಮೊಣ್ಣಗೇರಿ

---

19ನೇ ಪುಟದಿಂದ

ಆಗ ಹರಾಜಾಗದ ಮರ್ಯಾದೆ ಸಂಪ್ರದಾಯ ಪ್ರಕಾರ ಮನೆಗೆ ಬಂದ್ ಕಳ್‌ದಕ್ಕೆ ಹರಾಜಾತ್ ಪಾಪ. ಆ ಹೈದ ಬಾಕಕನ ಅವಂಗೂ ಬೈಗಳೇ. ಅವ ಗಟ್ಟಿ ನಿರ್ಧಾರ ಮಾಡಿಟು. ನಾನ್ ಏನಾದರೂ ಅದೇ ಗೂಡೆನ ಮೊದುವೆ ಆದುತ. ಮನೆಲಿ ಅವ್ವಂಗೆ ಮಾತ್ರ ಹೊಟ್ಟೆ ಕಿಚ್ಚ್ ಬಂದದೆ.

ಹೀಂಗೆ ಒಂದ್ ಕಣ್ಣಿಗೆ ಸುಣ್ಣ. ಇನ್ನೊಂದು ಕಣ್ಣಿಗೆ ಬೆಣ್ಣೆ ಹಾಕುವ ಅವ್ವಂದರಿಗೆ ನೀವೇನ್ ಹೇಳ್ರಿ?

(ಈ ಕಥೆಲಿ ಬರುವ ಹೆಸ್ರ್ ಕಾಲ್ಪನಿಕ)

ರಚನೆ : ಅನು ಗಿರೀಶ್‌ಕುಮಾರ್, ಮಡಿಕೇರಿ

## ಬಿ. ಇಡಿ. ಪರೀಕ್ಷೆಯಲ್ಲಿ ತೃತೀಯ ರ್‍ಯಾಂಕ್



ಮಂಗಳೂರು ವಿಶ್ವವಿದ್ಯಾನಿಲಯ 1998-99ರ ಮೇ ಸಾಲಿನಲ್ಲಿ ನಡೆಸಿದ ಬಿ. ಇಡಿ. ಪದವಿ ಪರೀಕ್ಷೆಯಲ್ಲಿ ಮಂಗಳೂರಿನ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿನಿ **ಕವಿತ ಪೊನ್ನಪ್ಪ**ನವರು ತೃತೀಯ ರ್‍ಯಾಂಕನ್ನು (83%) ಗಳಿಸಿರುತ್ತಾರೆ. ಇವರು ಮಡಿಕೇರಿ ನಿವಾಸಿ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾಗಿರುವ ಪಾಡಿಚೆಟ್ಟೀರ ಪೊನ್ನಪ್ಪ, ಲತ ದಂಪತಿಗಳ ಪುತ್ರಿ.

ಇವರು ಪ್ರಸ್ತುತ ಮದೆನಾಡಿನ ಶ್ರೀ ಮದೆ ಮಹೇಶ್ವರ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗ ಕಾರ್ಯ ನಿರ್ವಹಿಸುತ್ತಿದ್ದಾರೆ.

---

## ಅರೆಭಾಷಿಕ ಮಾಜಿ ಸೈನಿಕರ ಸಹಕಾರ ಸಂಘ, ಮೈಸೂರು.

**(ಭೂ ದಳ, ವಾಯುದಳ, ನೌಕಾದಳ, ಪ್ಯಾರ ಮಿಲಿಟರಿ, ಸಿ.ರ್.ಪಿ.ಎಫ್., ಬಿ.ಎಸ್.ಎಫ್., ಸಿ.ಎಸ್.ಎಫ್., ಕೋಸ್ಟಲ್ ಗಾರ್ಡ್ಸ್)**

ಹೊಸ ಶತಮಾನಕ್ಕೆ ಕಾಲಿಡಲು ಕೆಲವೇ ದಿನಗಳು ಬಾಕಿಯಿದೆ. ಹೊಸತನ್ನು ಬರಮಾಡಿ ಹಳತನ್ನು ಬೀಳ್ಕೊಡುವುದು ಸಂಪ್ರದಾಯ. ಅಂದ ಹಾಗೆ 31-12-99ರಂದು ಜಯಲಕ್ಷ್ಮೀಪುರಂನಲ್ಲಿರುವ ನಮ್ಮ ಸಮಾಜದ ಕಟ್ಟಡದಲ್ಲಿ ಮಾಜಿ ಸೈನಿಕರು ಮತ್ತು ಅವರ ಸಂಸಾರ ಹಾಗೂ ಅವಲಂಬಿತರುಗಳ **ಸಂತೋಷ ಕೂಟ**ವನ್ನು ನಡೆಯಿಸಲು ಏರ್ಪಡಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿರುವ ಆಸಕ್ತ ಅರೆಭಾಷಿಕ ಗೌಡ ಮಾಜಿ ಸೈನಿಕರು ತಪ್ಪದೆ ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸುವಂತೆ ಕೋರಲಾಗಿದೆ. ಭೋಜನ ವ್ಯವಸ್ಥೆ ಇದೆ. ಕಾರ್ಯಕ್ರಮವು ಸಂಜೆ ಆರು ಗಂಟೆಯಿಂದ ಎಂಟು ಗಂಟೆತನಕ ಇರುವುದು. ಸರ್ವ ಅರೆಭಾಷಿಕ ಗೌಡ ಮಾಜಿ ಸೈನಿಕರು ಇದನ್ನೆ ಆಹ್ವಾನ ಪತ್ರಿಕೆ ಎಂದು ಭಾವಿಸಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸುವಂತೆ ಕೋರಲಾಗಿದೆ.

**ಸಂಘಟನಾ ಕಾರ್ಯದರ್ಶಿ : ಕರ್ಣೇಯ್ಯನ ಲಕ್ಷ್ಮಣ**

✆ : 489052, 516771, ನಂ. 1047/28 'A', 2ನೇ ಮುಖ್ಯ ರಸ್ತೆ, 7ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು

---

## ಉತ್ತಮ ತಳಿಯ ನಾಯಿ ಮರಿಗಳು ಮಾರಾಟಕ್ಕಿವೆ



ಲ್ಯಾಬಡಾರ್, ಡಾಬರ್ ಮ್ಯಾನ್, ಆಲ್‌ಶೇಷನ್, ಜರ್ಮನಿ ಶೆಪರ್ಡ್, ಗೋಲ್ಡನ್ ರೆಟಿವರ್, ಗ್ರೇಟ್‌ಡನ್ಸ್, ಡಾಲ್ಮ್‌ಶನ್ ಹಾಗೂ ಇತರ ಎಲ್ಲಾ ತರದ ನಾಯಿ ಮರಿಗಳು ಸೂಕ್ತ ಬೆಲೆಯಲ್ಲಿ ಲಭ್ಯವಿದೆ.

ಮೂರು ತಿಂಗಳ ಮೇಲ್ಪಟ್ಟ ಮರಿಗಳಿಗೆ ತರಬೇತಿ ನೀಡಲು ತರಬೇತುದಾರರು ಇದ್ದಾರೆ.

ಆಸಕ್ತರು ಸಂಪರ್ಕಿಸಿ : 0821 / 516771

**ಭಾಸ್ಕರ್**

C/o ಕೊಡಗು ಸಂಗಾತಿ, 35, ಸವಿತಾ ನಿಲಯ,
1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿ ಪುರಂ, ಮೈಸೂರು -12

---

## 3ನೇ ವರ್ಷದ ಪುಣ್ಯಸ್ಮರಣೆ



**ದಿ. ನಡುಮನೆ ಎ. ಸುಬ್ಬಯ್ಯ**

ನೀವ್ ತಾರೀಖ್ 3-11-96ರ್ಲಿ ನಮ್ಮನ್ನ ಬಿಟ್ಟ್ ವೈಕುಂಠವಾಸಿಯಾದ ಬ್ಯಾನೆ ನಮಿಗೆ ಮರೆಯಕ್ಕೆ ಆದುಲ್ಲೆ. ನಿಮ್ಮ ಆತ್ಮಕ್ಕೆ ಯಾಗೋಳು ಚಿರಶಾಂತಿನ ಬೇಡ್‌ವೆ.

**ಮಂಜ್ಞ : ಶ್ರೀಮತಿ ಮತ್ತೆ ಶ್ರೀ ನಡುಮನೆ ಕರುಂಬಯ್ಯ,**
**ಸೊಸೆ : ವನಿತಾ, ಮಗ್ಳು : ರಮ್ಯ, ಬೆಂಗಳೂರು.**

K. R. N. N. - 240

10-01-96 TCI Kar. 09592

# ಸಂಗಾತಿಯ ಅಳಿವು ಉಳಿವಿನ ಪ್ರಶ್ನೆ - ಕೊನೆ ಪ್ರಯತ್ನ

ಕೊಡಗು ಸಂಗಾತಿ ಪಾಕ್ಷಿಕವು ದಿನಾಂಕ 1-4-97 ರಿಂದ ಇಲ್ಲಿಯ ತನಕ ಹಲವಾರು ಎಡರು ತೊಡರುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ನಿರಂತರವಾಗಿ ಹೊರಹೊಮ್ಮಿ ಬಂದಿರುವುದು ನಿಮಗದು ತಿಳಿದ ವಿಚಾರವಾಗಿದೆ. ಮಲೆನಾಡಿನ ಅರೆಭಾಷಿಕ ಜನಾಂಗದ ಏಕೈಕ ಪತ್ರಿಕಾ ಮಾಧ್ಯಮವಾಗಿ, ತನ್ನ ನಾಡಿನ ಮೂಲೆ ಮೂಲೆ ಹಳ್ಳಿಗಳಿಂದ, ಗ್ರಾಮಾಂತರ ಪ್ರತಿಭೆಯನ್ನು ಒಂದೊಂದಾಗಿ ಹೆಕ್ಕುತ ಪರಿಚಯಿಸುವಲ್ಲಿ ಸಫಲವಾಗಿದೆ. ಜನಾಂಗದಲ್ಲಿ ಬರಹಗಾರರನ್ನು ಹುಟ್ಟು ಹಾಕುವ ಏಕೈಕ ವೇದಿಕೆಯಾಗಿದೆ. ಹಿರಿಯರ ವೀರಗಾಥೆಯನ್ನು ಸ್ಮರಿಸುವ ಮತ್ತು ಮುಂದಿನ ತಲೆಮಾರಿಗೆ ರವಾನಿಸುವ ಮಾಧ್ಯಮ ಸಹ ಆಗಿದೆ. ಕೊಡಗಿನ ಮಣ್ಣಿನಲ್ಲಿ ಅರೆಭಾಷಿಕರೆಂಬ ವಿಶಿಷ್ಟ ಪಂಗಡವೊಂದಿದೆ ಎನ್ನುವುದನ್ನು ದೇಶದ ಉದ್ದಗಲಕ್ಕೂ ಸಾರಿ, ಸಾರಿ ಪ್ರಚಾರ ಪಡಿಸುತ್ತಿದೆ. ಚಿಕ್ಕ ಪುಟ್ಟ ಬರಹಗಾರರಿಗೆ ತಮ್ಮ ಸಾಹಿತ್ಯದ ಪ್ರತಿಭೆಯನ್ನು ಹೊರಸೂಸಲು ಇದಕ್ಕಿಂತ ಭಿನ್ನ ಮಾಧ್ಯಮ ಇನ್ನೊಂದಿಲ್ಲ ಎಂದರೆ ಅತಿಶಯವೇನಲ್ಲ. ಆದರೆ ಯಾರೇ ಆದರೂ ಒಂದು ಪತ್ರಿಕೆಯನ್ನು ನಡೆಯಿಸಲು ಜಾಹೀರಾತು, ಶುಭಾಶಯಗಳು, ಪ್ರಕಟಣೆ ಇತ್ಯಾದಿ ಇಲ್ಲದೆ ಪತ್ರಿಕೆ ಹೊರತರುವುದು ಕಠಿಣ ಶ್ರಮವೂ ತ್ರಾಸದಾಯಕವೂ ಆಗಿದೆ. ಅಭಿಮಾನದ ಜನತೆಯನ್ನು ನಂಬಿ ಜನತೆಯ ಏಳ್ಗೆಯನ್ನು ಬಯಸಿ, ಬಡವ ಬಲ್ಲಿದರೆನ್ನದೆ, ಜನತೆಗೆ ಸಾಹಿತ್ಯದಲ್ಲಿ ಪ್ರಜ್ಞೆ ಮೂಡಿಸುತ್ತಾ, ಸಜ್ಜಾಗಿ ನಿರಂತರ ಗೌಡ ಜನಕ್ಕಾಗಿ ಹೋರಾಟ ಮಾಡುತ್ತಾ ಅಭಿವೃದ್ಧಿ ಬಯಸಿ ಹೊರಬಂದ ಪತ್ರಿಕೆ ಇದಾಗಿದೆ.

ಪ್ರಿಯ ಚಂದದಾರರಲ್ಲಿ ಹೆಚ್ಚಿನ ಜನರು ನವೀಕರಣಗೊಳಿಸದೆ ಇರುತ್ತಾರೆ. ಸಾಕಷ್ಟು ಸರ್ತಿ ಜ್ಞಾಪನಪತ್ರ ಕಳುಹಿಸಿದರು ಸಹ ಉದಾಸೀನ ಮನೋಭಾವನೆಯಿಂದ ವರ್ತಿಸುತ್ತಾರೆ. ಮನೆ ಮನೆಗೆ ಹೋಗಿ ವಸೂಲಿ ಮಾಡುವುದು ಆಗದ ಮಾತು. ಕೆಲವು ಜಾಹೀರಾತುದಾರರು ಇನ್ನು ಹಣ ಸಂದಾಯಿಸಿರುವುದಿಲ್ಲ.

ಹಿಂದಿನ ವರ್ಷಗಳಲ್ಲಿ ಸಾಕಷ್ಟು ನಷ್ಟವನ್ನು ಅನುಭವಿಸಿದ್ದರು ಸಹ ಇನ್ನು ಚೇತರಿಸಿಕೊಳ್ಳಲು ಹತ್ತಾರು ವರ್ಷಗಳೇ ಬೇಕು. ನಷ್ಟವನ್ನು ಭರಿಸಲು ಸಾಕಷ್ಟು ತಾಳ್ಮೆಯನ್ನು ಪ್ರದರ್ಶಿಸಿಯೂ ಆಯ್ತು. ಪತ್ರಿಕೆ ಉದ್ಯಮವು ಲಾಭದ ದಂಧೆ ಅಲ್ಲ. ಪೇಪರ್ ಖರ್ಚು, ಮುದ್ರಣ ಖರ್ಚು, ಸಿಬ್ಬಂದಿಗಳ ಖರ್ಚು, ಯಂತ್ರಗಳ ಮೇಲ್ವಿಚಾರಣೆ, ಸಂದರ್ಶನ ಖರ್ಚು, ಲೇಖನ ಸಾಮಗ್ರಿಗಳು, ಪ್ರಯಾಣ ಭತ್ಯೆ, ದೂರವಾಣಿ, ಅಂಚೆ ವೆಚ್ಚ, ಹೋಗುವವರು ಬರುವವರು ಇತ್ಯಾದಿ ಇತ್ಯಾದಿಗಳು. ಕಳೆದ ಮೇ ತಿಂಗಳಿಂದ "ಆಫ್‌ಸೆಟ್ ಮುದ್ರಣ ಮತ್ತು ಸ್ವಲ್ಪ ಉತ್ತಮ ತರದ ಪೇಪರ್" ಅಳವಡಿಸಿದ್ದೇವೆ. ಹಳೆದರದಲ್ಲಿ ಪತ್ರಿಕೆಯನ್ನು ಕಳುಹಿಸಲು ಸ್ವಲ್ಪ ಹಿಂದೆ ಮುಂದೆ ನೋಡಬೇಕಾದ ಸನ್ನಿವೇಶ ಉಂಟಾಗಿದೆ. ಕಷ್ಟ ಬಂದರೂ ನಷ್ಟ ಆಗಬಾರದು. ನಷ್ಟದ ಮೇಲೆ ನಷ್ಟ ಆಗುವುದು ಪತ್ರಿಕೆ ಮತ್ತು ಜನಾಂಗದ ದೃಷ್ಟಿಯಿಂದ ಶೋಭೆ ಅಲ್ಲ. ಸುಮಾರು 60%ಕ್ಕಿಂತಲೂ ಹೆಚ್ಚಿನ ಚಂದದಾರರು ಇನ್ನು ನವೀಕರಿಸಿರುವುದಿಲ್ಲ. ನೆನಪಿರಲಿ ಸಂಗಾತಿಯ ಋಣ ನವೀಕರಿಸದೆ ಇರುವ ಚಂದದಾರರಲ್ಲಿ ಉಳಿದುಕೊಂಡಿದೆ. ಮೂರು ತಿಂಗಳ ಹಿಂದಿನಿಂದಲೂ ಬಾಕಿ ಇರುವ ಚಂದದಾರರಿಗೆ ದಿನಾಂಕ 1-1-2000ರಿಂದ ಪತ್ರಿಕೆಯನ್ನು ಕಳುಹಿಸಲಾಗುವುದಿಲ್ಲವೆಂಬುದಕ್ಕೆ ವಿಷಾದಿಸುತ್ತೇವೆ. ಹಾಗೂ ಪತ್ರಿಕೆಯನ್ನು ತಿಂಗಳಿಗೊಂದರಂತೆ ಈಗಿನ ದರದಲ್ಲಿಯೇ ದಿನಾಂಕ 1-1-2000ರಿಂದ ತರಬೇಕಾದ ಅನಿವಾರ್ಯತೆ ಸಂಗಾತಿಗೆ ಒದಗಿಬಂದಿದೆ.

ನಮ್ಮ ಮನವಿಯನ್ನು ಓದುಗರು ಪುರಸ್ಕರಿಸಿ ಸಹಕರಿಸುವಂತೆ ನಮ್ಮ ಅರಿಕೆ ಆಗಿದೆ. ಚಂದದಾರರು ಶೀಘ್ರವಾಗಿ ನವೀಕರಿಸುವುದಲ್ಲದೆ ಜಾಹೀರಾತುಗಳನ್ನು ನೀಡಿ ಪುನಶ್ಚೇತನಗೊಳಿಸುವಂತೆ ಇನ್ನೊಮ್ಮೆ ನಮ್ಮ ಕೋರಿಕೆಯಾಗಿದೆ. ಪತ್ರಿಕೆ ಯಾವುದೇ ರೀತಿಯಲ್ಲು ನಿಂತು ಹೋಗಬಾರದು. ಪತ್ರಿಕೆ ನಿಂತದ್ದೆ ಆದರೆ ಜನಾಂಗದ ಐಕ್ಯತೆ, ಅಭಿವೃದ್ಧಿ ಕುಂಠಿತವಾಗುವುದರಲ್ಲಿ ಯಾವುದೆ ಸಂಶಯವಿರುವುದಿಲ್ಲ. ಆದ್ದರಿಂದ "ಜನಾಂಗದ ಹಿತ ಚಿಂತಕರು, ಪ್ರಜ್ಞಾವಂತರು, ಸ್ಥಿತಿವಂತರು, ಬಡವ ಬಲ್ಲಿದರು, ಪತ್ರಿಕಾ ಪ್ರೇಮಿಗಳು, ಜನಾಂಗ ಪ್ರೇಮಿಗಳು, ವ್ಯಾಪಾರಸ್ಥರು, ಮೇಲಾಗಿ ಸಮಾಜ, ವಿದ್ಯಾಸಂಸ್ಥೆ ಅಕಾಡೆಮಿ, ಮಹಿಳಾ ಒಕ್ಕೂಟ ಹಾಗೂ ಇತರೆ ಯುವ ಮಂಡಳಿಗಳು ಈ ಕೊಡಗು ಸಂಗಾತಿ ಸಂಸ್ಥೆಯ ಅಹವಾಲನ್ನು ಗಂಭೀರವಾಗಿ ಪರಿಗಣಿಸಿ ಚಿಂತಿಸುವಂತೆ ಮಹಾಜನತೆಯಲ್ಲಿ ಇನ್ನೊಮ್ಮೆ ನಿವೇದಿಸಿಕೊಳ್ಳುತ್ತಿದ್ದೇವೆ.

ಗೌರವ ಸಂಪಾದಕ ಹಾಗೂ ವ್ಯವಸ್ಥಾಪಕ : ಪಟ್ಟಡ ಪ್ರಭಾಕರ

ಸಂಪಾದಕಿ : ಪಟ್ಟಡ ಶೀಲಾಮಣಿ,
ಮತ್ತು ಸಂಗಾತಿ ಬಳಗ

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.